| ಸಂಪಾದಕ ಸಮಿತಿ | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ

| ಸಂಘದ ಸದಸ್ಯರಾಗಿ | | |
|---|---|---|
| ಮಹಾ ಪೋಷಕರು | – | 25,000/- |
| ಪೋಷಕರು | – | 5,000/- |
| ಸದಸ್ಯತ್ವ | – | 1,000/- |
| ವಾರ್ಷಿಕ ನಿರ್ವಹಣೆ | – | 250/- |

ಸಂಪುಟ : 5 ಸಂಚಿಕೆ : 3 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜುಲೈ–ಸೆಪ್ಟೆಂಬರ್ 2015

## ಅರ್ಪಣೆ



ಈ ಸಂಚಿಕೆಯನ್ನು ನಮ್ಮ ಸಮುದಾಯದ ಹಿತೈಷಿಗಳು ಹಾಗೂ ಸಂಘದ ಮಾಜಿ ಉಪಾಧ್ಯಕ್ಷರಾದ **ಬಿದರಗೆರೆ ಆರ್. ನಾಗರಾಜ್** ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಲಾಗಿದೆ

## ಸಂಪಾದಕೀಯ

*ಆತ್ಮೀಯರೇ ನಮಸ್ಕಾರ*

ನಮ್ಮೆಲ್ಲರ 'ಬೃಹಚ್ಚರಣ' ವಾರ್ತಾ ಪತ್ರಿಕೆಗೆ ನಾಲ್ಕು ವರ್ಷಗಳು ತುಂಬಿ, 16 ಸಂಚಿಕೆಗಳನ್ನು ಹೊರತರಲು ಅನುವು ಮಾಡಿಕೊಟ್ಟ ಸಂಘದ ಕಾರ್ಯಕಾರಿ ಸಮಿತಿಗೆ ಆಭಾರಿ. ಪತ್ರಿಕೆಯ ಬಗ್ಗೆ ತಮ್ಮ ಮೆಚ್ಚುಗೆಯ ಮಾತುಗಳಿಗೆ ಅಭಿನಂದನೆಗಳು. ನಿಮ್ಮ ಸಲಹೆ ಅಥವಾ ಟೀಕೆಗಳಿದ್ದಲ್ಲಿ ಸಂಕೋಚವಿಲ್ಲದೆ ನೇರವಾಗಿ ಸಂಪರ್ಕಿಸಿ. ತಮ್ಮ ಸಹಕಾರ ಹೀಗೆಯೇ ಮುಂದುವರೆಯಲೆಂದು ಕೋರುತ್ತೇನೆ.



ನಿಮ್ಮವ

■ **ಕೆ.ಸಿ.ನಟರಾಜನ್**

ಸಂಪಾದಕ, 9845113475

## ಅಧ್ಯಕ್ಷರ ನುಡಿ

*ಆತ್ಮೀಯ ಬಂಧುಗಳೇ, ನಮಸ್ಕಾರ.*

ಸಮುದಾಯದ ಕುಟುಂಬದ ಸದಸ್ಯರಿಗೆಲ್ಲಾ ಕನ್ನಡ ರಾಜ್ಯೋತ್ಸವ, ದೀಪಾವಳಿ ಹಬ್ಬದ ಶುಭಾಶಯಗಳು.

ದಿನಾಂಕ 02.10.2015ರಂದು ಸಂಘವು ಸತತ ಮೂರನೆಯ ವರ್ಷದ ಒಂದು ದಿನದ ಧಾರ್ಮಿಕ ಕ್ಷೇತ್ರ ಪ್ರವಾಸವು ದೊಡ್ಡಮಳೂರಿನ ಅಪ್ರಮೇಯ ಸ್ವಾಮಿ ದೇವಾಲಯ, ಕರಿಘಟ್ಟದ ಶ್ರೀನಿವಾಸ ದೇವಾಲಯ, ಶ್ರೀರಂಗಪಟ್ಟಣ ಶ್ರೀ ಮಣಿಕರ್ಣಿಕಾ ಗುಂಜಾ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಹಾಗೂ ನಿಮಿಷಾಂಬ ದೇವಾಲಯಗಳ ಪ್ರವಾಸವು ಉಲ್ಲಾಸಕರವಾಗಿತ್ತು.

'ಬೃಹಚ್ಚರಣ' ವಾರ್ತಾಪತ್ರಿಕೆಯು ಕಾರ್ಯಕಾರಿ ಸಮಿತಿಯ ಸಲಹೆಯಂತೆ 4 ವರ್ಷಗಳಿಂದ ಸತತವಾಗಿ ನಮ್ಮ ಸಮುದಾಯದ ಹದಿನಾರು ಗಣ್ಯರಿಗೆ ಅರ್ಪಿಸುವುದರೊಂದಿಗೆ ತಮ್ಮ ಕೈ ಸೇರುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸುತ್ತೇನೆ. ಪ್ರಾಯೋಜಕರಾದವರಿಗೆ ಧನ್ಯವಾದಗಳು.

ಹಿಂದಿನ ವರ್ಷದಂತೆಯೇ ಈ ಬಾರಿಯು ದಿನಾಂಕ: 06.12.2015ರಂದು ಕಿತ್ತಿಗಾನಹಳ್ಳಿ ಕ್ಷೇತ್ರದಲ್ಲಿ ಶ್ರೀನಿವಾಸ ಕಲ್ಯಾಣೋತ್ಸವವನ್ನು ವೇ॥ ಬ್ರ॥ ಶ್ರೀ ನಂಜುಂಡದೀಕ್ಷಿತರ ಸಮಕ್ಷಮದಲ್ಲಿ ನಡೆಸಲು ತೀರ್ಮಾನಿಸಿದೆ. ಭಾಗವಹಿಸುವವರು ಯಾವುದೇ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಂಪರ್ಕಿಸಬಹುದು. ಪೂಜಾ ಕೈಂಕರ್ಯದಲ್ಲಿ ಪ್ರಾಯೋಜಕರಾಗಲು ಬಯಸುವವರು ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ ಅಥವಾ ಖಜಾಂಚಿ ಶ್ರೀ ಸತೀಶ್‌ರವರನ್ನು ಸಂಪರ್ಕಿಸಬೇಕಾಗಿ ಕೋರುತ್ತೇನೆ.

ಸರ್ವ ಸದಸ್ಯರ ಸಭೆಯಲ್ಲಿ ತಾವು ಸೂಚಿಸಿದಂತೆ ಸಂಘಕ್ಕೆ ಸ್ವಂತ ನಿವೇಶನ ಇರಬೇಕು ಎಂಬುದು ಸರಿಯಷ್ಟೆ. ಉದಾರಿಗಳಾದ ತಾವು ಸಂಘದ ಕಾರ್ಯ ಚಟುವಟಿಕೆಗಳನ್ನು ನಡೆಸುವ ಸೂಕ್ತ ಸ್ಥಳಾವಕಾಶವನ್ನು ಸ್ವಇಚ್ಛೆಯಿಂದ ಉಚಿತವಾಗಿ ನೀಡುವುದಾದರೆ ಸಂಘ ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತದೆ.





ತಮ್ಮವ,

■ **ಎಸ್. ಸೋಮಸುಂದರ**




ದಿನಾಂಕ 02.10.2015ರ ಕರಿಘಟ್ಟ ಪ್ರವಾಸದಲ್ಲಿ – ನಮ್ಮವರು

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

### ಕಾರ್ಯಕಾರಿ ಸಮಿತಿ : 2015–2018

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಎ.ವಿ. ಮಂಜುನಾಥ, 98441 08202** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮಾ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |




ಕಳೆದ ಎರಡು ವರ್ಷಗಳಿಂದ ಮೈ.ಮಂ.ದ್ರಾ.ಬೃ.ಸಂಘದ ವತಿಯಿಂದ ಶ್ರೀ ಶ್ರೀನಿವಾಸದೇವರ ಕಲ್ಯಾಣೋತ್ಸವ ಕಾರ್ಯಕ್ರಮ ಏರ್ಪಡಿಸಿದಂತೆ, ಈ ವರ್ಷವೂ ತಾ.06.12.2015ನೇ ಭಾನುವಾರದಂದು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ಸಾಮೂಹಿಕ **ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ** ಕಾರ್ಯಕ್ರಮವನ್ನು ಬೃಹಚ್ಚರಣ ಸಮುದಾಯದ ಸದಸ್ಯರ ಕೋರಿಕೆಯಂತೆ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಸಮುದಾಯದ ಬಂಧುಗಳು ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಭಗವಂತನ ಕೃಪೆಗೆ ಪಾತ್ರರಾಗಲು ವಿನಂತಿ.

ಕಲ್ಯಾಣೋತ್ಸವ ಕಾರ್ಯದಲ್ಲಿ ಭಾಗವಹಿಸಲು ಇಚ್ಛೆಯುಳ್ಳ ದಂಪತಿಗಳು ಸಂಘದ ಕಾರ್ಯಕಾರಿಣಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಿ ರೂ.2500/– ಪಾವತಿಸಿ ನೋಂದಾಯಿಸಿಕೊಳ್ಳಲು ವಿನಂತಿ.

**ಮೈ.ಮಂ.ದ್ರಾ.ಬೃ.ಸಂಘ**

## ಕಗ್ಗದ ತಾತ್ಪರ್ಯ



ಏನು ಜೀವನದರ್ಥ? ಏನು ಪ್ರಪಂಚಾರ್ಥ?
ಏನು ಜೀವ ಪ್ರಪಂಚಗಳ ಸಂಬಂಧ?
ಕಾನದಿಲಿರ್ರುದೇನಾನು ಮುಂಟೇ? ಅದೇನು
ಜ್ಞಾನ ಪ್ರಯಾಣವೇಂ – ಮಂಕುತಿಮ್ಮ॥

ಈ ಪದ್ಯದಿಂದ 42ನೇ ಪದ್ಯದ ವರೆಗೂ ಒಂದು ನೂರು ಪ್ರಶ್ನೆಗಳ ಮಾಲೆಯೇ ಇದೆ. ಸಾಮಾನ್ಯವಾಗಿ ಮನುಷ್ಯರೆಲ್ಲರ ಹೃದಯದಲ್ಲಿ, ಬುದ್ಧಿಯಲ್ಲಿ ಕಲಕುವಂಥ ಪ್ರಶ್ನೆಗಳೇ ಇದೆ.

ಮಾನವನಿಗೂ ಮಾಧವನಿಗೂ ಒಂದು ಅವಿನಾ ಸಂಬಂಧವಿದೆ. ಎಂದು ಗೋಚರವಾಗುತ್ತದೆ. ಮಾನವನದು ಜೀವನ ಮಾಧವನದು ಪ್ರಪಂಚ. ಪಂಚಭೂತಗಳಿಂದ ಒಡಗೂಡಿದ ಪ್ರಪಂಚ ಪಂಚಭೂತಗಳಿಂದ ಜನಿಸಿದ ಮನುಷ್ಯ. ಮನುಷ್ಯ ತನ್ನ ಜೀವನವನ್ನು ಪ್ರಾರಂಭ ಮಾಡಿದಾಗ, ಅವನಿಗೆ ಎಷ್ಟೋ ಸಮಸ್ಯೆಗಳು ಎದುರಾಗುತ್ತವೆ. ಜೀವನದಲ್ಲಿ ಎಲ್ಲವೂ ದ್ವಂದ್ವವೇ ಸುಖ–ದುಃಖ ನೋವು–ನಲಿವು ಆಶೆ–ನಿರಾಶೆ ಜನನ–ಮರಣ ತೃಪ್ತಿ–ಅತೃಪ್ತಿ ಶಾಂತಿ–ಅಶಾಂತಿ ಸಮಾಧಾನ ಅಸಮಾಧಾನ ಇವೆಲ್ಲವನ್ನೂ ಮನುಷ್ಯ ಎದುರಿಸುತ್ತಾನೆ.

ವಿಶ್ವದಲ್ಲಿ ಎದುರಿಸುವ ಹವಾಮಾನ, ಉಷ್ಣಾಂಶ ಮುಂತಾದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹಾಗಾದರೆ ಇದೇ ಪ್ರಪಂಚದ ಅರ್ಥವೇ? ಪ್ರಪಂಚದಲ್ಲಿ ನಾವೆಲ್ಲವನ್ನು ಕಂಡಿದ್ದೇವೆಯೇ? ಇನ್ನೂ ಏನಾದರೂ ಕಾಣುವುದು ಇದೆಯೇ? ಇದೇ ನಮಗೆ ಸಿಗುವ ಜ್ಞಾನದ ಸಂಕೇತವೇ? ನಮಗೆ ತಿಳಿದು ಬರುವ ಜ್ಞಾನದ ಅಳತೆಯೇ? ಹೀಗೆ ನೂರಾರು ಪ್ರಶ್ನೆಗಳು ನಮ್ಮಲ್ಲಿ ಹುಟ್ಟುತ್ತವೆ. ಮುಖ್ಯವಾಗಿ ಸಾವು ಎನ್ನುವುದೇ ಮುಖ್ಯಪ್ರಶ್ನೆ. "ಜಾತಸ್ಯ ಮರಣಂ ಧ್ರುವಂ" ಹುಟ್ಟಿದವನು ಸಾಯಲೇಬೇಕು. ಹಾಗಾದರೆ ಸಾವು ಏಕೆ ಬರುತ್ತದೆ. ಸತ್ತ ನಂತರ ಹೋಗುವುದೆಲ್ಲಿಗೆ? ಹೀಗೆ ಅನೇಕ ಪ್ರಶ್ನೆಗಳು ಕಾಡುತ್ತವೆ.

ಅಲೆ ಅಲೆಯಾಗಿ ನೀರು ಸಮುದ್ರದ ದಡದಲ್ಲಿ ಹೊರಳಿ ಹೊರಳಿ ತರಂಗ ತರಂಗವಾಗಿ ಅಪ್ಪಿಸಿಕೊಂಡು ಬರುವುದನ್ನು ಕಂಡು ಯಾರು ತಾನೇ ಸಂತೋಷಪಡುವುದಿಲ್ಲ? ಪ್ರಪಂಚದ ಆನಂದವೆಲ್ಲಾ ಅದರಲ್ಲೇ ಇದೆಯೋ ಏನೋ ಅದರಲ್ಲೇ ಲೀನವಾಗೋಣ ಎಂದೆನಿಸುವಲ್ಲಿ ಆಶ್ಚರ್ಯವೇನಿಲ್ಲ.

ಪ್ರಪಂಚದ ಸೃಷ್ಟಿಯನ್ನು ಕಂಡು ನಿಬ್ಬೆರಗಾಗದವರು ಯಾರಿದ್ದಾರೆ? ಅಂತಹ ಮನಮೋಹಕ ಸಾಗರ ಸುನಾಮಿಯಾದರೆ ಗತಿ ಏನು? ಬೇಸಿಗೆಯಲ್ಲಿ ತಂಪಾಗಿ ಸುಳಿಯುವ ಗಾಳಿಯನ್ನು ಮಕ್ಕಳಿಲ್ಲದ ಮನೆಯಲ್ಲಿ ಮಗು ಓಡಾಡಿದಂತೆ ಎಂದಿದ್ದಾರೆ. ಕವಿಗಳು ಇಂತಹ ತಂಪಾದ ತನು, ಮನಗಳಿಗೆ ಹಿತವಾದ ಗಾಳಿ ಬಿರುಗಾಳಿಯಾಗಿ ಸುಂಟರಗಾಳಿಯಾದರೆ ಅದರ ಎದುರು ಹೋರಾಡುವವರಾರು?

ಪ್ರಕೃತಿಯ ಸಿರಿ ಸಂಪತ್ತನ್ನು ನೋಡಿ ತಣಿದ ಕವಿಗಳು ಪ್ರಪಂಚವೆಲ್ಲಾ ಆನಂದ–ಸಂತೋಷ–ನೆಮ್ಮದಿ ಸೊಗಸು ಎಂದಿದ್ದಾರೆ. ಈ ರೀತಿ ತಿಳಿದುಕೊಂಡಿರುವವರಿಗೆ ಭೂಮಿತಾಯಿ ಕಂಪನಿ ಅನೇಕ ಸಾವು ನೋವುಗಳನ್ನು ತಂದೊಡ್ಡಿದರೆ, ಜೀವನದಲ್ಲಿ ಕನಸು ಕಂಡವರ ಗತಿ ಏನು? ಇಂಥ ಸಂದರ್ಭಗಳು ಬಂದಾಗ ಅದನ್ನು ಕಂಡು ಕಂಗಾಲಾದ ಜನರು ಏನು ಮಾಡಲು ಸಾಧ್ಯ? ಇದೇ ಬ್ರಹ್ಮ ಅಥವಾ ಭಗವಂತನ ಲೀಲೆ ಎಂದು ತಿಳಿಯಬೇಕೇ? ಇದೇ ಜ್ಞಾನದ ಸಂಕೇತವೇ? ಅರಿವೇ? ತಿಳುವಳಿಕೆಯೇ? ಇದೇ ಜ್ಞಾನದ ಸಾಕ್ಷಿಯೇ ಎಂದು ಪ್ರಶ್ನಿಸಿದ್ದಾರೆ.

**–ಜಿ.ಪಿ. ಲಕ್ಷ್ಮೀದೇವಿ**

# ಕರಿಘಟ್ಟ ಪ್ರವಾಸ ನನ್ನ ಅನಿಸಿಕೆ

ಬೃಹಚ್ಚರಣ ಸಂಘದ ವತಿಯಿಂದ ತಾ: 2.10.2015ರಂದು 3ನೇ ಪ್ರವಾಸವಾಗಿ ದೊಡ್ಡಮಳೂರು, ಕರಿಘಟ್ಟ ಮತ್ತು ಗುಂಜಾ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನಗಳಿಗೆ ಪ್ರವಾಸವನ್ನು ಏರ್ಪಡಿಸಲಾಗಿತ್ತು. 120 ಜನ (ಸದಸ್ಯರು ಮತ್ತು ಕುಟುಂಬದವರು) ಭಾಗಿಯಾಗಿದ್ದರು. 5 ಬಸ್ಸುಗಳನ್ನು (A,B,C,D and E) ಏರ್ಪಡಿಸಲಾಗಿತ್ತು. ಬೆಳಗಿನ ಜಾವದ ತಂಪಿನ ಮತ್ತು ಮಳೆಯ ವಾತಾವರಣದಲ್ಲಿ ಸಮಯಕ್ಕೆ ಸರಿಯಾಗಿ ಬಂದು ಭಾಗಿಗಳು ಬಸ್ಸಿನಲ್ಲಿ ಕುಳಿತು ಸುಮಾರು 7.00 ಗಂಟೆಗೆ ಬಸವನಗುಡಿಯ ಕೃಷ್ಣರಾವ್ ಉದ್ಯಾನವನದ ಸಮೀಪದಿಂದ ಹೊರಟರು. ನಾನು ಮತ್ತು ನನ್ನ ಕುಟುಂಬ 'ಏ' ಬಸ್ಸಿನಲ್ಲಿ ಕುಳಿತು ಪ್ರಯಾಣವನ್ನು ಮುಂದುವರಿಸಿದೆವು.

'ಏ' ಬಸ್ಸಿಗೆ ಅರುಣ ಮತ್ತು ಅಶೋಕರವರು ಬಸ್ಸಿನ ಮೇಲ್ವಿಚಾರಣೆ ವಹಿಸಿದ್ದರು. ಸುಗಮವಾಗಿ ಹೊರಟ ವಾಹನ ಬೆಂಗಳೂರಿನಿಂದ 60 ಕಿ.ಮೀ. ದೂರದ ದೊಡ್ಡ ಮಳೂರನ್ನು ತಲುಪಿತು. ದಾರಿಯಲ್ಲಿ ಒಂದು ಬ್ಯಾಗ್, ಟವಲ್, ನೀರಿನ ಬಾಟಲ್, ಬಿಸ್ಕಟ್, ಪೆಪರ್‌ಮಿಂಟ್ ಮತ್ತು ಕುಲಾವಿಯನ್ನು ಪ್ರತಿಯೊಬ್ಬರಿಗೂ ಹಂಚಿದರು. ದೊಡ್ಡಮಳೂರು ದೇವಸ್ಥಾನದ ಸಮೀಪದಲ್ಲಿ ಬಸ್‌ಗಳು ಬಂದು ನಿಂತವು. ಭಕ್ತಾದಿಗಳು ಬಸ್‌ನಿಂದ ಇಳಿದು ಆವರಣವನ್ನು ಪ್ರವೇಶಿಸಿದರು. ಇದೇ ಅಪ್ರಮೇಯಸ್ವಾಮಿ ಮತ್ತು ಅಂಬೆಗಾಲು ಕೃಷ್ಣನ ದೇವಸ್ಥಾನ ಎದುರು ಪುರಂದರ ಮಂಟಪವಿದೆ. ಇಲ್ಲೇ ಪುರಂದರದಾಸರ 'ಜಗದೋದ್ಧಾರನ' ಹಾಡನ್ನು ರಚಿಸಿದ ಜಾಗ. ಈ ದೇವಸ್ಥಾನವನ್ನು ನವನೀತ ಕೃಷ್ಣನ ದೇವಸ್ಥಾನವೆಂದೂ ಕರೆಯಲ್ಪಡುತ್ತೆ. ಇಲ್ಲಿ ನಿಂತಿರುವ ಅಪ್ರಮೇಯ ಸ್ವಾಮಿ ದೇವರ ವಿಗ್ರಹದಲ್ಲಿರುವ ಮೇಲಿನ ಎರಡು ಕೈಗಳಲ್ಲಿರುವ ಶಂಕು ಮತ್ತು ಚಕ್ರ, ಕೆಳಗಿರುವ ಎರಡು ಕೈಗಳಲ್ಲಿ ಪದ್ಮ ಮತ್ತು ಗದೆಗಳಿವೆ. ಇತಿಹಾಸದ ಪ್ರಕಾರ ಶ್ರೀ ರಾಮಚಂದ್ರ ಇಲ್ಲಿ ವಾಸವಾಗಿದ್ದನೆಂದೂ ಈ ದೇವರಿಗೆ ಶ್ರೀ ರಾಮಪ್ರೇಮಸ್ವಾಮಿ ಎಂದೂ ಕರೆಯುತ್ತಾರೆ. ಇಲ್ಲಿನ ನವನೀತ ಕೃಷ್ಣ ಪುತ್ರ ದೋಷ ಮತ್ತು ಸಾಯನ ದೋಷವನ್ನು ನಿವಾರಣೆ ಮಾಡುತ್ತಾನೆ ಎಂಬ ನಂಬಿಕೆ ಭಕ್ತಾದಿಗಳಿಗೆ ಇದೆ. ದೇವರ ಗುಡಿಗೆ ಬಂದ ನಂತರ ಒಳಗಡೆ ಬೆಳಗಿನ ಉಪಹಾರ ಏರ್ಪಡಿಸಲಾಗಿತ್ತು. ಬಿಸಿ ಬಿಸಿ ಪೊಂಗಲ್, ತಟ್ಟೆ ಇಡ್ಲಿ, ಸಾಂಬಾರ್, ಚಟ್ನೀ, ವಡೆ ಮತ್ತು ಕಾಫಿಯನ್ನು ಕೊಟ್ಟರು. ಈ ಉಪಹಾರವನ್ನು ಪ್ರಾಯೋಜಿಸಿದವರು ಶ್ರೀಮತಿ ಮತ್ತು ಶ್ರೀ ಸೋಮಸುಂದರಂ ಮತ್ತು ಕುಟುಂಬದವರು. ಆಹಾ ಎಂಥ ರುಚಿಕರ. ನಂತರ ದೇವರುಗಳ ದರ್ಶನ. ನಂತರ ವಿರಾಮ.

ಅಲ್ಲಿಂದ ಮುಂದೆ ಕರಿಘಟ್ಟಕ್ಕೆ ಪ್ರಯಾಣ ಬೆಳೆಸಿದೆವು. ಸುಂದರವಾದ ಪರಿಸರದಲ್ಲಿ ಸುಗಮವಾಗಿ ಬಸ್ಸಿನಲ್ಲಿ ಕುಳಿತು ಬೆಟ್ಟದ ಮೇಲೆ ಬಂದೆವು. ಬೆಟ್ಟದ ಮೇಲೆ ಶ್ರೀ ಶ್ರೀನಿವಾಸನ ದೇವಸ್ಥಾನ (ಕರಿಗಿರಿವಾಸ) ವಿಷ್ಣುವಿನ ಈ ದೇವಸ್ಥಾನವನ್ನು ಬೈರಾಗಿ ವೆಂಕಟರಮಣ ಮತ್ತು ಶ್ರೀ ಶ್ರೀನಿವಾಸ ದೇವಸ್ಥಾನ ಎಂದೂ ಕರೆಯುತ್ತಾರೆ. 1697 ಅಡಿ ಎತ್ತರದಲ್ಲಿ ಇರುವ ಈ ದೇವಸ್ಥಾನದ ಬದಿಯಲ್ಲಿ ಕಾವೇರಿ ನದಿಯ ಉಪನದಿ ಲೋಕಪಾವನಿ ಹರಿಯುತ್ತದೆ. ಈ ದೇವಸ್ಥಾನದಲ್ಲಿ ಪೂಜೆ ಮಾಡಿದವರಿಗೆ ಜೀವನದಲ್ಲಿ ಬಂದ ಸಕಲ ದೋಷಗಳು ನಿವಾರಣೆ ಆಗುತ್ತದೆಂಬ ನಂಬಿಕೆ ಇದೆ. ಈ ಬೆಟ್ಟಕ್ಕೆ 450 ಮೆಟ್ಟಿಲುಗಳು ಇವೆ ಮತ್ತು ಒಳ್ಳೆಯ ರಸ್ತೆ ಕೂಡ ಇದೆ. ಪಶ್ಚಿಮ ದಿಕ್ಕಿಗೆ ಶ್ರೀಮತಿ ಪದ್ಮಾವತೀ ವಿಗ್ರಹ ಇರುವ ದೇವಸ್ಥಾನ ಇದೆ. ವರಾಹ ಪುರಾಣದಲ್ಲಿ 'ನೀಲಾಚಲ' ಎಂಬ ಹೆಸರು ಗೋಚರವಾಗುತ್ತದೆ. 'ಕರಿ' ಎಂಬ ಹೆಸರಿನ ಆನೆ ಸ್ನಾನಮಾಡುತ್ತಿರುವ ನಾಲ್ಕು ಹೆಣ್ಣುಮಕ್ಕಳನ್ನು ಕೊಂದದ್ದಕ್ಕೆ ಈ ಜಾಗಕ್ಕೆ ಕರಿಘಟ್ಟ ಎಂದು ನಾಮಕರಣವಾಗಿದೆ. ಕುಟ್ಟಮುನಿ ಎಂಬ ಮುನಿಯು ತಪಸ್ಸು ಮಾಡಿ ಆನೆ ಕೊಂದ ಮಕ್ಕಳನ್ನು ಬದುಕಿಸಿದನೆಂಬ ನಂಬಿಕೆ ಇದೆ. ಫಿರಂಗಿಗಳನ್ನು ಬ್ರಿಟಿಷಿನವರು ಈ ಬೆಟ್ಟದ ಮೇಲೆ ಇಟ್ಟಿದ್ದರೆಂದು ಇತಿಹಾಸಗಳು ತಿಳಿಸುತ್ತವೆ. ಶ್ರೀ ಶ್ರೀನಿವಾಸನ ದರ್ಶನವಾದ ನಂತರ ನಮ್ಮ ಪ್ರಯಾಣ ಮುಂದೆ ಸಾಗಿತು.

ಬೆಟ್ಟದಿಂದ ಇಳಿದ ನಮ್ಮ ವಾಹನಗಳು ಪ್ರಯಾಣವು ಮುಂದೆ ದಾರಿಯಲ್ಲಿ ಇರುವ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಕಡೆಗೆ ಸಾಗಿತ್ತು. ಈ ದೇವಸ್ಥಾನವನ್ನು 450 ವರ್ಷದ ಹಿಂದೆ ದ್ರಾವಿಡ ಶೈಲಿಯಲ್ಲಿ ಕಟ್ಟಲ್ಪಟ್ಟಿದೆ ಎಂಬುದು ಇತಿಹಾಸದಲ್ಲಿದೆ. ನರಸೀಪುರ ಎಂಬ ಹೆಸರು ಈ ದೇವಸ್ಥಾನದಿಂದ















ಬಂದಿದೆ ಎಂಬ ನಂಬಿಕೆ. ಅಲ್ಲಿನ ಅಗಸನಿಗೆ ಒಂದು ದಿನ ಕನಸಿನಲ್ಲಿ ನರಸಿಂಹ ದೇವರು ಬಂದು ನಿನ್ನ ಬಟ್ಟೆ ಒಗೆಯುವ ಕಲ್ಲಿನ ಕೆಳಗಡೆ ನನ್ನ ವಿಗ್ರಹವಿದೆ. ಅದನ್ನು ಪ್ರತಿಷ್ಠಾಪನೆ ಮಾಡಿ ನನ್ನ ದೇವಸ್ಥಾನವನ್ನು ಕಟ್ಟಿಸು. ಆ ಕಲ್ಲಿನ ಕೆಳಗಡೆ ಚಿನ್ನದ ನಾಣ್ಯಗಳಿವೆ. ಅದನ್ನು ಕಟ್ಟುವುದಕ್ಕೆ ಉಪಯೋಗಿಸು' ಎಂದು ಹೇಳಿದರಂತೆ. ಈ ದೇವಸ್ಥಾನಕ್ಕೆ ಸುಂದರ ಗೋಪುರವಿದೆ. ಒಳಗಡೆ ಸುಂದರ ದೇವರ ವಿಗ್ರಹವಿದೆ. ದೇವರ ಕೈಯಲ್ಲಿ ಗುಂಜಾ ಗಿಡದ ಬೇರು ಇದೆ. ಪ್ರತಿ ವರ್ಷ ರಥೋತ್ಸವ ನಡೆಯುತ್ತದೆ. ದರ್ಶನದ ನಂತರ ಒಳ್ಳೆಯ ಬಿಸಿ ಬಿಸಿ ಭೋಜನ – ಕೊಸಂಬರಿ, ಪಲ್ಯ, ಚಿತ್ರಾನ್ನ, ಉಪ್ಪಿನಕಾಯಿ, ಪಾಯಸ, ಹಪ್ಪಳ, ಅನ್ನ, ಹುಳಿ, ತಿಳಿಸಾರು, ಒಬ್ಬಟ್ಟು, ಆಂಬೋಡೆ, ಮಜ್ಜಿಗೆ ಇದ್ದವು. ಭೋಜನವಾದ ನಂತರ ಪಕ್ಕದಲ್ಲಿ ಹರಿಯುವ ಕಾವೇರಿ ನದಿಯ ತೀರದಲ್ಲಿ ಕುಳಿತು ವಿಶ್ರಮಿಸಿದೆವು. ಮುಂದಕ್ಕೆ ಕೆಲವರು ನಿಮಿಷಾಂಬ ದೇವಸ್ಥಾನಕ್ಕೆ ಹೊರಟರು. ವಾಪಸ್ ಬಂದ ನಂತರ ಲಘು ಉಪಹಾರ ಸಿಹಿ, ಖಾರ, ಕಾಫಿ ವಿತರಿಸಲಾಯಿತು.

ಸಂಜೆ ಸುಮಾರು 6.00 ಗಂಟೆಗೆ ಗುಂಜಾ ನರಸಿಂಹ ಕ್ಷೇತ್ರ ಬಿಟ್ಟು ನಾವುಗಳು ರಾತ್ರಿ 9.30ಕ್ಕೆ ಬೆಂಗಳೂರು ಸೇರಿದವು. ದಾರಿಯಲ್ಲಿ ಎಲ್ಲರಿಗೂ ಡಬ್ಬಿಗಳಲ್ಲಿ ಹುಳೀ ಅವಲಕ್ಕಿ, ಮೊಸರನ್ನ, ಮದ್ದೂರು ಟಿಫಾನೀಸ್‌ನಲ್ಲಿ ಅದು, ಇದು ಆಹಾ ಎಂತೆಂಬ ಸಮಯ. ಖುಷಿಯಲ್ಲಿ ಎಲ್ಲರೂ ತಮ್ಮ ತಮ್ಮ ನಿವಾಸಕ್ಕೆ ತೆರಳಿದೆವು. ಗಾಂಧಿ ಜಯಂತಿಯಂದು ನಮ್ಮವರು ಈ ಪಯಣದಲ್ಲಿ ಸಂತೋಷವಾಗಿ ಕಾಲ ಕಳೆದೆವು. ಸರ್ವರಿಗೂ ನನ್ನ ಅನಂತಾನಂತ ವಂದನೆಗಳು.



● ಸಿ.ಎಸ್. ಶ್ರೀನಿವಾಸಮೂರ್ತಿ

# ಪ್ರವಾಸದ ಅನುಭವ

ಸುಮಾರು 125 ಸದಸ್ಯರ ನಮ್ಮ ತಂಡ, ಇದೇ ಅಕ್ಟೋಬರ್ 2ರಂದು ಬೆಳಿಗ್ಗೆ 7:30 ಗಂಟೆಗೆ ಬೆಂಗಳೂರಿನಿಂದ ಹೊರಟು, ದೊಡ್ಡ ಮಳೂರು ತಲುಪಿದಾಗ ಸಮಯ 9:30 ಆಗಿತ್ತು. ಅಪ್ರಮೇಯಸ್ವಾಮಿ ಮತ್ತು ಅಂಬೆಗಾಲು ನವನೀತ ಕೃಷ್ಣನ ದರ್ಶನಾನಂತರ, ದೇವಾಲಯದ ಒಳಾವರಣದಲ್ಲಿಯೇ ಉಪಹಾರ ವ್ಯವಸ್ಥೆ. ಪ್ರಯಾಣ ಮುಂದುವರೆಸಿ, ಸುಮಾರು 12:00ರ ಹೊತ್ತಿಗೆ ಕರಿಘಟ್ಟ ತಲುಪಿದೆವು. ಕರಿಘಟ್ಟದಲ್ಲಿ ಮೂಲ ಶ್ರೀನಿವಾಸ ದೇವರ ಹಾಗೂ ಯೋಗ ಶ್ರೀನಿವಾಸ, ಭೋಗ ಶ್ರೀನಿವಾಸ ಮತ್ತು ಪದ್ಮಾವತಿ ಅಮ್ಮನವರ ದರ್ಶನ ಭಾಗ್ಯ. ದೇವರಿಗೆ ನಮ್ಮ ತಂಡದ ಹಲವಾರು ಸದಸ್ಯರಿಂದ ಸಂಗೀತ, ಭಜನೆ ಹಾಗೂ ಸ್ತೋತ್ರಗಳ ಭಾವಪೂರ್ಣ ಸೇವೆ. ನಂತರ, ಕರಿಘಟ್ಟದ ತಪ್ಪಲಲ್ಲೇ ಇರುವ ಶ್ರೀ ಮಣಿಕರ್ಣಿಕಾ ಗುಂಜ ಲಕ್ಷ್ಮೀನರಸಿಂಹ ದೇವಾಲಯಕ್ಕೆ ಪ್ರಯಾಣ ಹಾಗೂ ದರ್ಶನ. ಪಕ್ಷಮಾಸ ಪ್ರಯುಕ್ತ, ದೇವಸ್ಥಾನದ ಮಗ್ಗುಲಲ್ಲೇ ಹರಿಯುವ ಕಾವೇರಿ ನದಿಯಲ್ಲಿ ತಂಡದ ಕೆಲವು ಸದಸ್ಯರಿಂದ ತರ್ಪಣ ವಿಧಿ. ತದನಂತರ, ಪುಷ್ಕಳ ಭೋಜನ. ಭೋಜನ ನಂತರ ವಿಶ್ರಾಂತಿ. ತಂಡದ ಕೆಲವರಿಗೆ ಬಹಳ ಹತ್ತಿರದಲ್ಲೇ ಇರುವ ಶ್ರೀ ನಿಮಿಷಾಂಬ ದೇವಿ, ಮೌಕ್ತಿಕೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವರುಗಳ ದರುಶನ ಭಾಗ್ಯ. ಸಂಜೆ ಸುಮಾರು 6.00ರ ಹೊತ್ತಿಗೆ ಅಲ್ಲಿಂದ ಹೊರಟ ನಮ್ಮ ತಂಡ ಬೆಂಗಳೂರು ತಲುಪಿದಾಗ ರಾತ್ರಿ 9:00 ಆಗಿತ್ತು.

ನಮ್ಮ ಸಂಘದ ಪದಾಧಿಕಾರಿಗಳು, ಮೊದಲೇ ಈ ಎಲ್ಲ ಸ್ಥಳಗಳಿಗೆ ಭೇಟಿ ನೀಡಿ, ಸದಸ್ಯರ ಸೌಕರ್ಯಗಳನ್ನು ಗಮನದಲ್ಲಿರಿಸಿಕೊಂಡು, ಎಲ್ಲ ತರಹದ ಸುವ್ಯವಸ್ಥೆಗಳನ್ನೂ ಮಾಡಿದ್ದರಿಂದ, ಯಾತ್ರೆಯು ಯಾವ ತರಹದ ವಿಘ್ನಗಳೊಡ್ಡದೆ, ಸುಲಲಿತವಾಗಿ ನಡೆಯಿತು. ಅವರಿಗೆ ಯಾತ್ರಾತಂಡದ ಸದಸ್ಯರೆಲ್ಲರೂ ಆಭಾರಿ.

## ಪ್ರವಾಸಿಸಿದ ಕ್ಷೇತ್ರಗಳ ಕಿರು ಪರಿಚಯ

**ಮಳೂರು ಅಪ್ರಮೇಯಸ್ವಾಮಿ ಮತ್ತು ಅಂಬೆಗಾಲು ನವನೀತ ಕೃಷ್ಣನ ದೇವಸ್ಥಾನ :** 'ಕಣ್ವ' ನದಿಯ ದಂಡೆಯ ಮೇಲಿರುವ ಮಳೂರು ನಗರದ ಅಪ್ರಮೇಯಸ್ವಾಮಿ ದೇವಸ್ಥಾನ 11ನೇ ಶತಮಾನದಲ್ಲಿ ಚೋಳದೇಶದ ರಾಜನಾದ ರಾಜೇಂದ್ರಸಿಂಹನಿಂದ ಕಟ್ಟಲ್ಪಟ್ಟಿತು. ಕ್ಷೇತ್ರದೇವರ ವಾರ್ಷಿಕ ಬ್ರಹ್ಮೋತ್ಸವದ ಕಾಲದಲ್ಲಿ, ಸೂರ್ಯನ ಕಿರಣಗಳು ನೇರ ದೇವಸ್ಥಾನದ ಗರ್ಭಗುಡಿಯ ಮೇಲೆ ಬೀಳುವುದು ಇಲ್ಲಿಯ ವಿಶೇಷ.



ನಾರದಾವತಾರಿಯಾದ ದಾಸ ಶ್ರೇಷ್ಠ ಪುರಂದರದಾಸರ ಪ್ರಸಿದ್ಧ ಕೃತಿ **ಜಗದೋದ್ಧಾರನ ಆಡಿಸಿದಳೆಶೋದೆ** ರಚನೆಗೆ ಪ್ರೇರೇಪಿಸಿದ ಅಂಬೆಗಾಲು ನವನೀತ ಕೃಷ್ಣನ ಮೂರ್ತಿಯನ್ನು ನೋಡಲು ಎರಡು ಕಣ್ಣುಗಳು ಸಾಲದು.

**ಶ್ರೀಕ್ಷೇತ್ರ ಕರಿಘಟ್ಟ :** ಬೆಂಗಳೂರು –ಮೈಸೂರು ಮಾರ್ಗದಲ್ಲಿ ಶ್ರೀರಂಗ ಪಟ್ಟಣದ ಮಗ್ಗುಲಲ್ಲಿ ಇರುವ 'ಶ್ರೀಕ್ಷೇತ್ರ ಕರಿಘಟ್ಟ' ಬೆಟ್ಟವು ಸಮುದ್ರ ಮಟ್ಟದಿಂದ ಸುಮಾರು 2,697 ಅಡಿ ಎತ್ತರದಲ್ಲಿದೆ. ವರಾಹ ಪುರಾಣದಲ್ಲಿ 'ಕರಿಘಟ್ಟ' ಬೆಟ್ಟವನ್ನು 'ನೀಲಾಚಲ' ಎಂಬ ಹೆಸರಿನಲ್ಲಿ ಪ್ರಸ್ತಾವಿಸಲಾಗಿದೆ. ತ್ರೇತಾಯುಗದಲ್ಲಿ ಸೀತಾಪಹರಣ ನಂತರ, ಲಂಕೆಗೆ ಸೇತುವೆ ನಿರ್ಮಾಣ ಸಂದರ್ಭದಲ್ಲಿ, ಸುಗ್ರೀವನು ನೀಲಾಚಲ ಬೆಟ್ಟವನ್ನು ತಿರುಮಲೆ (ಈಗಿನ ತಿರುಪತಿ)ಯಿಂದ ಕೊಂಡೊಯ್ಯುತ್ತಿದ್ದ ಸಮಯದಲ್ಲಿ, ಹಲವಾರು ವಿಷ್ಣುಭಕ್ತರ ಪ್ರಾರ್ಥನೆಯ ಮೇರೆಗೆ, ಬೆಟ್ಟವನ್ನು ಅಲ್ಲಿಯೇ (ಈಗಿರುವ ಜಾಗದಲ್ಲಿ) ಬಿಟ್ಟುಹೋದನೆಂಬ ಪ್ರಸ್ತಾವನೆ ಇದೆ. ಮತ್ತೊಂದು ಕತೆಯ ಪ್ರಕಾರ, ಒಂದು ಕೊಬ್ಬಿದ ಮದದಾನೆಯ ಹಾವಳಿ ತಡೆಯಲಾರದೆ ಜನಗಳು ಪರಿತಪಿಸುತ್ತಿರಲು, ಕಾಕುತ್ಸಮುನಿಗಳು, ಮದದಾನೆಯ ಕಾಟದಿಂದ ಜನರನ್ನು ಪಾರುಮಾಡಲು ವಿಷ್ಣುವಿನಲ್ಲಿ ಬಿನ್ನವಿಸಿದರು. ಆ ನಂತರ ಈ ಕ್ಷೇತ್ರಕ್ಕೆ 'ಕರಿಘಟ್ಟ' ಎಂಬ ಹೆಸರು ಪ್ರಚಲಿತವಾಯಿತು. ಬ್ರಿಟಿಷರು ಶ್ರೀರಂಗಪಟ್ಟಣದ ಆಕ್ರಮಣದ ಸಮಯದಲ್ಲಿ ಈ ಬೆಟ್ಟದ ಮೇಲೆ ಫಿರಂಗಿಗಳನ್ನೂ, ಮದ್ದುಗುಂಡುಗಳನ್ನೂ ಶೇಖರಣೆ ಮಾಡುತ್ತಿದ್ದ ಕತೆಗಳು ಇತಿಹಾಸ ಪುಟಗಳಲ್ಲಿ ಪ್ರಸ್ತುತಪಡಿಸಲಾಗಿದೆ.

ಶ್ರೀಕ್ಷೇತ್ರ ಕರಿಘಟ್ಟದ ಮುಖ್ಯ ದೇವರು, ಭೃಗು ಮಹರ್ಷಿಗಳಿಂದ ಸ್ಥಾಪಿಸಲ್ಪಟ್ಟ 'ಶ್ರೀನಿವಾಸ'. ಶ್ರೀನಿವಾಸನ ಎಡಬಲಗಳಲ್ಲಿ 'ಯೋಗ ಶ್ರೀನಿವಾಸ' ಹಾಗೂ 'ಭೋಗ ಶ್ರೀನಿವಾಸ' ದೇವರುಗಳ ವಿಗ್ರಹಗಳು. ಪಶ್ಚಿಮಕ್ಕೆ ಪದ್ಮಾವತಿದೇವಿಯ ಗುಡಿ. ನಿತ್ಯಾಲಂಕಾರದ ನಂತರ ಶ್ರೀನಿವಾಸ ದೇವರು ಬೈರಾಗಿ ರೂಪಿನಂತೆ ಕಾಣುವ ಸಲುವಾಗಿ 'ಬೈರಾಗಿ ವೆಂಕಟರಮಣ'ನೆಂದು ಪ್ರಸಿದ್ಧಿ. ನಮ್ಮ ದರ್ಶನ ಸಮಯದಲ್ಲಿ ಶ್ರೀನಿವಾಸನನ್ನು ಅರಿಶಿನದಲ್ಲಿ ಅಲಂಕಾರ ಮಾಡಿದ್ದರಿಂದ, ಅವನ ಚಕ್ಷುಗಳು ನಮ್ಮೆಲ್ಲರನ್ನು ದಿಟ್ಟಿಸಿ ನೋಡುತ್ತಿದ್ದವೆಂಬ ಒಂದು ಭಾವನೆ. ಅವನ ದಿವ್ಯದೃಷ್ಟಿಯ ಅನುಗ್ರಹ ನಮ್ಮ ಸಂಘದ ಮೇಲೆ ಸದಾ ಇರಲಿ.

**ಶ್ರೀ ಮಣಿಕರ್ಣಿಕಾ ಗುಂಜ ಲಕ್ಷ್ಮೀ ನರಸಿಂಹ ದೇವಾಲಯ :** ಶ್ರೀ ಮಣಿ ಕರ್ಣಿಕಾ ಗುಂಜ ಲಕ್ಷ್ಮೀನರಸಿಂಹ ದೇವಾಲಯವು ಕಾವೇರಿ ಹಾಗೂ ಲೋಕಪಾವನಿ ನದಿಗಳ ಸಂಗಮಕ್ಕೆ ಬಹು ಹತ್ತಿರದಲ್ಲೇ ಇದೆ. ನರಸಿಂಹಸ್ವಾಮಿ ಮೂರ್ತಿಯ ಬಲಗೈಯಲ್ಲಿ 'ಗುಲಗಂಜಿಮಣಿ' ಹಿಡಿದಿರುವ ಹಿನ್ನೆಲೆಯಲ್ಲಿ ಒಂದು ದಂತಕತೆ ಇದೆ. ಹತ್ತಿರದ ಊರಿನ ಒಬ್ಬ ಅಗಸನಿಗೆ ನರಸಿಂಹ ದೇವರು ಕನಸಿನಲ್ಲಿ ಕಾಣಿಸಿಕೊಂಡು ಅವನು ಬಟ್ಟೆಗಳನ್ನು ಒಗೆಯುತ್ತಿದ್ದ ನದಿಯ ಜಗಲಿಕಲ್ಲಿನ ಕೆಳಗೆ ನರಸಿಂಹ ದೇವರ ಮೂರ್ತಿಯಿರುವುದನ್ನು ಅರಿಕೆ ಮಾಡಿ ಆ ಮೂರ್ತಿಗೆ ಒಂದು ದೇವಾಲಯವನ್ನು ಕಟ್ಟಿಸಬೇಕೆಂದು ಪ್ರೇರೇಪಿಸಿದಾಗ, ಅಗಸನು ತನ್ನ ಬಡತನವನ್ನು ಬಿನ್ನವಿಸಲಾಗಿ, ನರಸಿಂಹಸ್ವಾಮಿಯು ಅದೇ ಜಗಲಿಕಲ್ಲಿನ ಕೆಳಗೆ ಚಿನ್ನದ ನಾಣ್ಯಗಳ ಕೊಪ್ಪರಿಗೆ ಇರುವುದನ್ನು ಅರುಹಿದನು. ದೇವರ ಇಚ್ಛೆಯಂತೆ ದೇವಾಲಯ ನಿರ್ಮಾಣವಾಯಿತು. ಕೆಲ ಸಮಯದ ನಂತರ ಆ ಅಗಸನು ಕಾಶೀ ಕ್ಷೇತ್ರಕ್ಕೆ ಹೋಗಲಿಚ್ಛಿಸಲಾಗಿ ದೇವರಲ್ಲಿ ಬಿನ್ನವಿಸಿದಾಗ, ನರಸಿಂಹ ದೇವರು "ಆ ದೇವಾಲಯವನ್ನು ಕಟ್ಟಿದ ಪುಣ್ಯವು ತೀರ್ಥಕ್ಷೇತ್ರ ದರ್ಶನ ಸಲುವಾಗಿ ಬರುವ ಪುಣ್ಯಕ್ಕಿಂತ ಒಂದು 'ಗುಲಗುಂಜಿ' ಯಷ್ಟು ಹೆಚ್ಚು" ಎಂಬ ವಿಷಯವನ್ನು ಆ ಅಗಸನಿಗೆ ಅರುಹಿದನು ಎಂಬ ಕತೆಯ ಮೂಲಕ ಕ್ಷೇತ್ರದ ಮಹಿಮೆಯನ್ನು ತಿಳಿಸಿದ ದೇವಸ್ಥಾನದ ಅರ್ಚಕರು, ನರಸಿಂಹಸ್ವಾಮಿ ಮೂರ್ತಿಯ ಬಲಗೈಯಲ್ಲಿ ಗುಲಗಂಜಿಮಣಿ ಹಿಡಿದಿರುವ ಸಂಕೇತವನ್ನು ವಿವರಿಸಿದರು.



**ಶ್ರೀ ನಿಮಿಷಾಂಬಾ ದೇವಾಲಯ :** ಶ್ರೀ ನಿಮಿಷಾಂಬಾ ಪಾರ್ವತಿದೇವಿಯ ಮತ್ತೊಂದು ಅವತಾರ. ಸೋಮ ವಂಶದ ಮುಕ್ತರಾಜನೆಂಬ ರಾಜನ ಪ್ರಾರ್ಥನೆಗೆ ಒಲಿದು, ರಾಜನ, 'ದುಷ್ಟದಾನವರನ್ನು ಸದೆಬಡಿವ ಕಾರ್ಯದಲಿ ಕ್ಷಣಾರ್ಧದಲ್ಲಿ ನೆರವಾಗುವ ಅಭಯವೇ', ದೇವಿಯ ಹೆಸರಿಗೆ ಕಾರಣವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದ ಈ ದೇವಾಲಯವು ಸುಮಾರು 400 ವರ್ಷಗಳ ಹಿಂದಿನದು. ಏಳು ಸುತ್ತಿನ ಗೋಪುರವಿರುವ ಸುಂದರ ಮಂದಿರ. ದೇವಿಯ ಮುಂದಿರುವ ಶ್ರೀಚಕ್ರಕ್ಕೆ ಸದಾ ಕುಂಕುಮಾರ್ಚನೆ. ದೇವಿಯ ಪಕ್ಕದ ಗುಡಿಯಲ್ಲಿ ಮೌಕ್ತಿಕೇಶ್ವರ ಅಥವಾ ಅಖಿಲೇಶ್ವರನ ಗುಡಿ. ಪುಟ್ಟ ಲಿಂಗಕ್ಕೆ ಸರಿಯಾದ ಪ್ರಮಾಣದ ನಂದಿಯ ವಿಗ್ರಹ. ಮೌಕ್ತಿಕೇಶ್ವರನ ಪಕ್ಕದ ಗುಡಿಯಲ್ಲಿ ಲಕ್ಷ್ಮೀನಾರಾಯಣ ದೇವರ ಸನ್ನಿಧಿ. ಭಕ್ತಾದಿಗಳ ಮನೆಗಳಲ್ಲಿ ಮದುವೆ ಮುಂತಾದ ಮಂಗಳ ಕಾರ್ಯಗಳ ಇಚ್ಛೆ, ಬಯಕೆ, ಬೇಡಿಕೆಗಳನ್ನು ಕ್ಷಣಾರ್ಧದಲಿ ಈಡೇರಿಸುವ ಶ್ರೀ ನಿಮಿಷಾಂಬಾ ದೇವಿಯ ಕೃಪಾಕಟಾಕ್ಷ ನಮ್ಮೆಲ್ಲರ ಮೇಲಿರಲಿ.



**ಬಿ.ಎನ್.ಗೋವಿಂದ ಪ್ರಸಾದ್**
98451 28229

## ದಿನಾಂಕ 02.10.2015ರ ಒಂದು ದಿನದ ಪ್ರವಾಸದ ನೋಟ



ಕರಿಘಟ್ಟದಲ್ಲಿ ಪಾನಕ ವಿತರಣೆ



ಕಾವೇರಿ ನದಿಯಲ್ಲಿ ಪಿತೃ ತರ್ಪಣ





ಕಾವೇರಿ ತಟದಲ್ಲಿ ಸುಮಂಗಲಿಯರು



ರಿಲ್ಯಾಕ್ಸಿಂಗ್



ರಾತ್ರಿಗೆ ಬುತ್ತಿ





ಸುಗ್ರಾಸ ಭೋಜನ

# ದಶಾವತಾರ

ವಿಷ್ಣುವಿನ ಅವತಾರಗಳಲ್ಲಿ ಹತ್ತು ಅವತಾರಗಳನ್ನು 'ದಶಾವತಾರ' ಎಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ಇವುಗಳಲ್ಲಿ ಮೊದಲ ಮೂರು ಅವತಾರಗಳು ಮತ್ಸ್ಯ, ಕೂರ್ಮ, ವರಾಹ ಅವತಾರಗಳನ್ನು ಸಾಂಕೇತಿಕ ಅವತಾರ ಎಂದು ಕರೆಯುತ್ತಾರೆ. ಈ ರೂಪದಲ್ಲಿ ವಿಷ್ಣುವಿನ ಪೂಜೆಯಾಗುವುದು ಅಪರೂಪವೇ. ಪ್ರಳಯದಿಂದ ಕಾಪಾಡಿದ ಎಂದು ನಂಬಲಾದ ಮತ್ಸ್ಯ ಅವತಾರ ಚಲನೆಯನ್ನು ಸೂಚಿಸಿದರೆ, ಸಮುದ್ರ ಮಥನಕ್ಕೆ ಆಧಾರವಾದ ಕೂರ್ಮಾವತಾರ ಸ್ಥಿತಿಯನ್ನು ಸೂಚಿಸುತ್ತದೆ. ಹಾಗೆಯೇ, ಭೂಮಿಯನ್ನು ತನ್ನ ಕೋರೆಗಳಿಂದ ಎತ್ತಿದ ಎಂದು ವಿವರಿಸಲಾದ ವರಾಹವು, ಕ್ರಿಯೆಯನ್ನು ಸೂಚಿಸುವ ಅವತಾರ. ಚಲನೆ, ಸ್ಥಿತಿ ಮತ್ತು ಕ್ರಿಯೆಗಳು ಸೃಷ್ಟಿಯ ಬಹುಮುಖ್ಯ ಲಕ್ಷಣಗಳೆಂಬುದನ್ನು ಈ ಅವತಾರಗಳು ಸೂಚಿಸುತ್ತದೆ. ಇನ್ನು ನರಸಿಂಹ, ವಾಮನ, ಪರಶುರಾಮ. ಈ ಮೂರು ಅವತಾರಗಳನ್ನು ಅರ್ಧಾವತಾರಗಳು ಎಂದು ಕರೆಯುತ್ತಾರೆ. ನರಸಿಂಹ ಅವತಾರದಲ್ಲಿ ಪ್ರಹ್ಲಾದನನ್ನು, ಅವನ ತಂದೆ, ಹಿರಣ್ಯಕಶಿಪುವೇ ಹಿಂಸಿಸುತ್ತಿರುವಾಗ ಮಹಾವಿಷ್ಣು ಅರ್ಧಸಿಂಹ ಮತ್ತು ಅರ್ಧ ಮಾನವನ ರೂಪತಾಳಿ, ಹಿರಣ್ಯಕಶಿಪುವನ್ನು ಸಂಹರಿಸುತ್ತಾನೆ. ಸಿಂಹ ಪ್ರಾಣಿಗಳಲ್ಲೇ ಬಲಿಷ್ಠವಾದದ್ದು. ಅದಕ್ಕೆ ವೀರ ಗುಣವುಳ್ಳ ಮಾನವ ದೇಹವೂ ಸೇರಿದರೆ ಸರ್ವಶಕ್ತಿ ಜೊತೆಗೂಡಿದಂತೆಯೇ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಬುದ್ಧಿಯಲ್ಲಿ ಮಾನವ ಮಿಗಿಲು ಎಂಬುದು ಸಹಜವಾದ ಎಣಿಕೆ. ಆದರೆ, ನರಸಿಂಹ ಅವತಾರದಲ್ಲಿ ತಲೆ ಪ್ರಾಣಿಯದಾಗಿದ್ದು, ದೇಹ ಮಾನವನದು. ಇದು ಅವತಾರದ ಅರ್ಧಸ್ವರೂಪಕ್ಕೆ ನಿದರ್ಶನವಾದಂತೆ ಅದು ಆವೇಶದ ಅಭಿವ್ಯಕ್ತಿ ಎಂಬುದನ್ನು ಸೂಚಿಸುತ್ತದೆ. ಇನ್ನು ವಾಮನ ಬಲಿಯನ್ನು ತ್ರಿವಿಕ್ರಮ ರೂಪ ತಾಳಿ ಪಾತಾಳಕ್ಕೆ ತಳ್ಳಿದ ಅವತಾರ. ಇಲ್ಲಿ ವಾಮನ ಮತ್ತು ತ್ರಿವಿಕ್ರಮ ಎರಡೂ ಒಂದೇ ಶಕ್ತಿಯ ರೂಪಗಳು ಎಂಬುದನ್ನು ಗಮನಿಸಬೇಕು. ನೋಡಲು ವಾಮನನಂತಿದ್ದರೂ, ಅವನಲ್ಲಿ ತ್ರಿವಿಕ್ರಮ ಶಕ್ತಿ ಅಡಗಿರಬಹುದು ಎಂಬುದನ್ನು ಈ ಅವತಾರವು ಸೂಚಿಸುತ್ತದೆ. ಪರಶುರಾಮನು ತನ್ನ ಅವತಾರದಲ್ಲಿ ಪ್ರಜಾಪೀಡಕರಾದ ಕ್ಷತ್ರಿಯರನ್ನೆಲ್ಲ ನಾಶ ಮಾಡಿದ ಚಿತ್ರ ಕಣ್ಮುಂದೆ ಬರುತ್ತದೆ. ಆಡಳಿತ ನಡೆಸುವವರು ಅಹಂಕಾರ ತೋರಿದರೆ, ಭಗವಂತನು ಅವರನ್ನು ಶಿಕ್ಷಿಸುತ್ತಾನೆ ಎಂಬುದನ್ನು ಇದು ತೋರಿಸುತ್ತದೆ. ಅಷ್ಟೇ ಅಲ್ಲ, ಮುಂದಿನ ಅವತಾರದಲ್ಲಿ ವಿಷ್ಣುವು ಕ್ಷತ್ರಿಯನಾಗಿಯೇ ಜನಿಸುತ್ತಾನೆ. ಇದು ಈ ಪ್ರಕ್ರಿಯೆಯಲ್ಲಿರುವ ಸಂಕೀರ್ಣತೆಗೆ ನಿದರ್ಶನವಾಗಿದೆ. ಈ ಮೂರು ಅವತಾರಗಳಲ್ಲಿ ಸಂದೇಶವಿದೆ. ಆದರೆ ಭಗವಂತನ ಸ್ವರೂಪ ಇಲ್ಲೆಲ್ಲ ಸೀಮಿತ ಅವಧಿಯಲ್ಲಿ ಬಂದು ಹೋಗುತ್ತದೆ. ಹಾಗಾಗಿಯೇ ಇವುಗಳನ್ನು ಅರ್ಧಾವತಾರಗಳು ಎಂದು ಹೇಳಲಾಗುವುದು. ಇವನ್ನೆಲ್ಲಾ ಆವೇಶಾವತಾರ ಅಥವಾ ವಿಷ್ಣುವು ತಾತ್ಕಾಲಿಕವಾಗಿ ಧರಿಸಿದ್ದ ಅವತಾರ ಎಂದು ವಿಶ್ಲೇಷಿಸುವುದೂ ಇದೆ.


ರಾಮ, ಕೃಷ್ಣರನ್ನು, ವಿಷ್ಣುವಿನ ಪೂರ್ಣಾವತಾರಗಳು ಎಂದು ಹೇಳಲಾಗುತ್ತದೆ. ವಿಷ್ಣುವು ಹೆಚ್ಚಾಗಿ ಪೂಜಿತನಾಗುವುದು ಈ ರೂಪಗಳಲ್ಲೇ. ಶ್ರೀರಾಮನ ಜೀವನ ಚಿತ್ರಣವೇ ಆದರ್ಶದ ಪ್ರತಿರೂಪವಾಗಿದೆ. ಜೀವನದ ವಿವಿಧ ಸವಾಲುಗಳನ್ನು, ಮಾನವನು ಹೇಗೆ ಎದುರಿಸಬೇಕು ಎಂಬುದನ್ನು ಸ್ವತಃ ಭಗವಂತನೇ ಅಭಿನಯಿಸಿ ತೋರಿಸಿದ ಅವತಾರಗಳೇ ಇವು. ಶ್ರೀರಾಮನ ಅವತಾರದಲ್ಲಿ ಬಹಳ ಮುಖ್ಯವಾಗಿ ಕಾಣುವುದು ಕೌಟುಂಬಿಕ ಚಿತ್ರಣ. ಶ್ರೀರಾಮ ನೊಬ್ಬನೇ ಎಲ್ಲಿಯೂ ಪೂಜಿತನಾಗುವುದಿಲ್ಲ. ಸೀತೆ, ಲಕ್ಷ್ಮಣ, ಹನುಮಂತ, ರಾಮನ ಜೊತೆಯಲ್ಲಿ ಇರುತ್ತಾರೆ. ಕೆಲವೊಮ್ಮೆ ಭರತ ಮತ್ತು ಶತ್ರುಘ್ನ ಕೂಡ ಜೊತೆಗಿರುತ್ತಾರೆ. ಇಂತಹ ತುಂಬಿದ ಕುಟುಂಬವೇ ರಾಮಾವತಾರದ ಸಂದೇಶ. ರಾಮಾಯಣದಲ್ಲಿ ಕುಟುಂಬ ಎಂಬುದು ವಿಶಾಲವಾದ ನೆಲೆಯಲ್ಲಿ ಚರ್ಚಿತವಾಗಿದೆ. ಅದು ಒಂದು ಸಂಸಾರಕ್ಕೆ ಸೀಮಿತವಾದ ಕಲ್ಪನೆಯಲ್ಲ. ಇಡೀ ಮನುಕುಲವೇ ಒಂದು ಎಂಬ ಉನ್ನತ ನೆಲೆಯದು. ಹೀಗಾಗಿ ಅಲ್ಲಿ ಹನುಮಂತ, ಸುಗ್ರೀವ, ಜಾಂಬವಂತರಂತಹ ವೀರರಿಗೆ ಮಾತ್ರವಲ್ಲ, ಅಳಿಲಿಗೂ ಒಂದು ಮಹತ್ತರ ಸ್ಥಾನವಿದೆ. ಬೇಜವಾಬ್ದಾರಿಯ ಮಾತಿಗೂ ಇಲ್ಲಿ ಒಂದು ಬೆಲೆ ಇದೆ. ಈ ಅರ್ಥದಲ್ಲಿ ಪರಿಪೂರ್ಣತೆ ರಾಮಾವತಾರಕ್ಕೆ ಇದೆ. ಅಷ್ಟೇ ಅಲ್ಲ, ಆಕಾರದಲ್ಲಿಯೂ ಶ್ರೀರಾಮನು ಪರಿಪೂರ್ಣ ಪುರುಷಾಕೃತಿ ಎಂಬುದು ಇಲ್ಲಿ ಗಮನಾರ್ಹ. ಅದಕ್ಕಾಗಿ ಶ್ರೀರಾಮನನ್ನು ಮರ್ಯಾದಾ ಪುರುಷೋತ್ತಮ ಎಂದು ಕರೆಯುತ್ತಾರೆ. ನಮ್ಮ ಜೀವನದಲ್ಲಿ ನಡೆ–ನುಡಿಗಳು ಒಂದೇ ರೀತಿಯಿದ್ದರೆ, ಮಾದರಿಯಾಗಿ ಇತರರಿಗೆ



ಸಂದೇಶವಾಗಬಲ್ಲದೇ ವಿನಾ ಕೇವಲ ಆಚರಣೆ ಇಲ್ಲದ ಉಪದೇಶದಿಂದಲ್ಲ ಎಂಬ ಸಂದೇಶ ಶ್ರೀರಾಮನ ಅವತಾರದಲ್ಲಿದೆ.

ಶ್ರೀಕೃಷ್ಣನು ಸಮುದಾಯದ ದೇವತೆ. ಈ ಅವತಾರದ ವ್ಯಾಪ್ತಿಯೂ ಬಹಳ ದೊಡ್ಡದು. ಇವನನ್ನು ಅವತಾರವೆನ್ನದೆ ವಿಷ್ಣುವಿನ ಪರಿಪೂರ್ಣ ಅಂಶವೆಂದೇ ಕರೆಯುವುದೂ ಇದೆ. ಶ್ರೀಕೃಷ್ಣನ ಅವತಾರದ ವೈಶಿಷ್ಟ್ಯವೆಂದರೆ, ಈತ, ತಾನೇ ಘಟನಾವಳಿಯ ಕೇಂದ್ರವಾಗಿ, ಸಾಧಿಸಿದ್ದಕ್ಕಿಂತಲೂ ಹೆಚ್ಚಾಗಿ, ಯಾರಿಂದ ಯಾವ ಕೆಲಸವನ್ನು ತೆಗೆದುಕೊಳ್ಳಬೇಕು ಎಂಬ ಕುಶಲಿಯಾಗಿ ಕಾಣಿಸುತ್ತಾನೆ. ರಾಜನೀತಿ ತಜ್ಞನನ್ನಾಗಿ ಕೃಷ್ಣನನ್ನು ಅರ್ಥಮಾಡಿಕೊಳ್ಳಲು ಇಡೀ ಮಹಾ ಭಾರತವೇ ಇದೆ. ಕೃಷ್ಣನ ಬಾಲಲೀಲೆಗಳಲ್ಲಿಯೇ ಅಸುರ ಸಂಹಾರದ ಕಥೆಗಳು ಹಾಸುಹೊಕ್ಕಾಗಿ ಬಂದಿವೆ. ಸೃಷ್ಟಿ ವ್ಯಾಪಾರವನ್ನು ಮುಗಿಸಿ, ಆಲದೆಲೆಯ ಮೇಲೆ ಮಲಗಿ, ನಿಶ್ಚಿಂತೆಯಿಂದ ನೀರಿನ ಮೇಲೆ ತೇಲುತ್ತಾ, ತಾನು ಆಡುತ್ತಿರುವ ಜೀವನ ನಾಟಕವನ್ನು ನೆನೆಸಿಕೊಂಡು ಆನಂದ ಪಡುವ ಬಾಲಕೃಷ್ಣನ ಚಿತ್ರ ಚಿರಪರಿಚಿತ. ಇದು ಶ್ರೀಕೃಷ್ಣಾವತಾರದ ಸಂದೇಶವೂ ಹೌದು. ಸಂಸಾರದೊಳಗಿದ್ದು ಇಲ್ಲದಂತೆ, ಸಕಲವೂ ತಾನಾಗಿಯೂ, ಸಕಲವನ್ನು ಅನುಭವಿಸುತ್ತಾ ಸ್ಥಿತಪ್ರಜ್ಞನಾಗುವ ಜ್ಞಾನಿಯ ಚಿತ್ರಣ ಇಲ್ಲಿದೆ. ಭಾರತೀಯ ಚಿಂತನಾ ಪರಂಪರೆಯ ಸಾರವೇ ಆಗಿರುವ ಭಗವದ್ಗೀತೆಯ ಬೋಧಕನೇ ಶ್ರೀಕೃಷ್ಣ. ಬದುಕಿನ ಸಾರವನ್ನೇ ಹೇಳುವ ಈ ಗ್ರಂಥವು, ಕೃಷ್ಣಾವತಾರದ ಸಾರರೂಪವೂ ಆಗಿದೆ. ಉಳಿದಂತೆ ಚಾರಿತ್ರಿಕವಾದ ಬುದ್ಧನನ್ನು ಒಂಬತ್ತನೆಯ ಅವತಾರವೆಂದೂ ಗುರುತಿಸಲಾಗುವುದು. ಕ್ರಿಯಾತ್ಮಕವಾದ ಎಲ್ಲಾ ಅವತಾರಗಳ ಜಂಜಾಟವನ್ನು ಮುಗಿಸಿ ಶಾಂತ ಮನಃಸ್ಥಿತಿ ಪಡೆಯುವ ಚಿತ್ರಣವನ್ನು ಬೌದ್ಧಾವತಾರದಲ್ಲಿ ಕಾಣಬಹುದು. ಬಲರಾಮನನ್ನು ಒಂಭತ್ತನೆಯ ಅವತಾರ ಎಂದು ಕರೆಯುವ ವಾಡಿಕೆಯೂ ಅಲ್ಲಲ್ಲಿ ಇದೆ. ಇದು ಕೃಷಿ ನಾಯಕನಿಗೆ ಗೌರವ ಸೂಚಿಸುವ ಪ್ರಯತ್ನ ಎಂದು ಹೇಳಬಹುದು. ಪರಮಾತ್ಮನ ಸೃಷ್ಟಿ ನಿರಂತರ ಮತ್ತು ನವನವೀನ ಎಂದು ಸೂಚಿಸುವ ಸಲುವಾಗಿಯೇ ಇನ್ನೂ ಆಗಬೇಕಾಗಿರುವ ಕಲ್ಕಿ ಎಂಬ ಹತ್ತನೆಯ ಅವತಾರವನ್ನು ಸೂಚಿಸಲಾಗಿದೆ.

ದಶಾವತಾರ ಪರಿಕಲ್ಪನೆಯಲ್ಲಿ ಜೀವವಿಕಾಸದ ಚಿತ್ರಣವೂ ಇದೆ. ಮೊದಲು ಕಾಣಿಸಿಕೊಂಡಿದ್ದು ಜಲಚರ ಜೀವಿಗಳು ಎಂಬುದನ್ನು ಮತ್ಸ್ಯಾವತಾರ ಸೂಚಿಸಿದರೆ, ಜಲ ಮತ್ತು ಭೂಮಿಗಳೆರಡರಲ್ಲಿಯೂ ಓಡಾಡಬಲ್ಲ ಉಭಯವಾಸಿ ಜೀವಿಗಳು ಸೃಷ್ಟಿಯಾದವೆಂಬುದನ್ನು ಕೂರ್ಮಾವತಾರವು ಸೂಚಿಸುತ್ತದೆ. ನಂತರ ಬಂದ ಸಸ್ತನಿಗಳನ್ನು ವರಾಹ ಅವತಾರ ಸೂಚಿಸಿದರೆ, ಪ್ರಾಣಿ ಸ್ಥಿತಿಯಿಂದ ಮಾನವ ವಿಕಾಸಗೊಂಡಿದ್ದನ್ನು ನರಸಿಂಹ ಅವತಾರ ಸೂಚಿಸುತ್ತದೆ. ಆರಂಭದಲ್ಲಿ ಕಾಣಿಸಿಕೊಂಡ ಕುಬ್ಜ ಮಾನವರನ್ನು ವಾಮನ ಅವತಾರ ಸೂಚಿಸಿದರೆ, ವಿಕಾಸಗೊಂಡ ಆದರ್ಶವಾದಿ ಮಾನವನನ್ನು ರಾಮಾವತಾರ ಸೂಚಿಸುತ್ತದೆ. ರಾಜನೀತಿ ತಜ್ಞನ ಪಾತ್ರವನ್ನು ಕೃಷ್ಣನೂ, ಆಧ್ಯಾತ್ಮಿಕ ವಿಕಸನವನ್ನು ಬುದ್ಧನೂ ಸೂಚಿಸುತ್ತಾನೆ. ಕಲ್ಕಿಯು ಆಧುನಿಕ ಮಾನವನ ಸ್ವರೂಪ. ಹೀಗೆ ದಶಾವತಾರ ಕಲ್ಪನೆಯಲ್ಲಿ ಮಾನವ ವಿಕಾಸವಿರುವುದನ್ನು ಗಮನಿಸಬಹುದು.



■ ಅನಿಲ್ ರಮೇಶ್
9980027189



## ದಾರ್ಶನಿಕ ಪ್ರಾಧ್ಯಾಪಕ

# ಸರ್ಜಾಪುರ ಲಕ್ಷ್ಮಣರಾವ್

## (ಪ್ರೊ. ಎಸ್.ಕೆ. ಲಕ್ಷ್ಮಣರಾವ್)

ಬೃಹಚ್ಚರಣ ಸಮುದಾಯದ ಹಿರಿಯರಲ್ಲೊಬ್ಬರು ಶ್ರೀ ಎಸ್.ಕೆ. ಲಕ್ಷ್ಮಣರಾವ್‌ರವರು ಸರ್ಜಾಪುರದ ಶ್ರೀಕೃಷ್ಣರಾವ್ ಮತ್ತು ಶ್ರೀಮತಿ ಸರಸ್ವತಮ್ಮನವರ ದ್ವಿತೀಯ ಪುತ್ರನಾಗಿ ದಿನಾಂಕ: 9.8.1925ರಲ್ಲಿ ಜನಿಸಿದರು. ತುಂಬು ಕುಟುಂಬದ ಸದಸ್ಯರಾದ ಇವರು ಚಿಕ್ಕಂದಿನಿಂದಲೂ ವಿದ್ಯಾಭ್ಯಾಸದಲ್ಲಿ ಅತೀವ ಆಸಕ್ತಿ ವಹಿಸಿ, 1946ರಲ್ಲಿ ಬಿ.ಎಸ್ಸಿ. ಮೊದಲನೇ ರ‍್ಯಾಂಕ್, 1949ರಲ್ಲಿ ಎಂ.ಎಸ್ಸಿ. ಮೊದಲನೇ ರ‍್ಯಾಂಕ್ ಮತ್ತು 1953ರಲ್ಲಿ ಪಿಎಚ್.ಡಿ.ಯನ್ನು ಪಡೆದಿದ್ದಾರೆ. ಶ್ರೀಯುತರು ಬೆಂಗಳೂರಿನ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕರಾಗಿ 1946ರಿಂದ 1951ರ ವರೆಗೆ ವೃತ್ತಿ ಜೀವನ ಆರಂಭಿಸಿದರು. ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ (IIsc)ನಲ್ಲಿ 1951ರಿಂದ 1955ರ ವರೆಗೆ ರಿಸರ್ಚ್ ಅಸಿಸ್ಟೆಂಟ್ ಆಗಿ, ಅಲ್ಲಿಯೇ ಗಣಿತ ಅಧ್ಯಾಪಕರಾಗಿ 1955ರಿಂದ 1961ರ ವರೆಗೆ ಮುಂದುವರೆದರು. ನಂತರ ರೀಜನಲ್ ಇಂಜಿನೀಯರಿಂಗ್ ಕಾಲೇಜ್ (REC) ವಾರಂಗಲ್‌ನಲ್ಲಿ 1961ರಲ್ಲಿ ಗಣಿತದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಸೇರಿ 1962ರಿಂದ 1985ರ ವರೆಗೆ ಪ್ರೊಫೆಸರ್ ಆಗಿ ತೊಡಗಿಕೊಂಡಿದ್ದರು.

ಶ್ರೀ ಕೃಷ್ಣದೇವರಾಯ ಯೂನಿವರ್ಸಿಟಿ, ಅನಂತಪುರ ಮತ್ತು ಪದ್ಮಾವತಿ ಯೂನಿವರ್ಸಿಟಿ, ತಿರುಪತಿಯಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿಯೂ ಸೇವೆ ಸಲ್ಲಿಸಿದರು. ಪ್ರೊ. ಲಕ್ಷ್ಮಣರಾಯರ ಮೇಲ್ವಿಚಾರಣೆಯಲ್ಲಿ 40ಕ್ಕೂ ಅಧಿಕ ವಿದ್ಯಾರ್ಥಿಗಳು ಪಿಎಚ್.ಡಿ.ಯನ್ನು ಪಡೆದಿದ್ದಾರೆ. ಇದಲ್ಲದೆ ಇವರ ಗಣಿತಕ್ಕೆ ಸಂಬಂಧಿಸಿದ 74 ಸಂಶೋಧನಾ ವಿಷಯಗಳು ದೇಶೀ ಮತ್ತು ವಿದೇಶೀ ನಿಯತ ಕಾಲಿಕೆಗಳಲ್ಲಿ ಪ್ರಕಟಣೆಯಾಗಿದೆ. ಬಿಎಚ್‌ಇಎಲ್ ಮತ್ತು IIscನಲ್ಲಿ ಸಮಾಲೋಚಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಶ್ರೀಯುತರು ವಿವಿಧ ಪ್ರಖ್ಯಾತ ಗಣಿತ ಮತ್ತು ವಿಜ್ಞಾನ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸದಸ್ಯ ರಾಗಿಯೂ, ಸಂಪಾದಕರಾಗಿಯೂ ಇದ್ದರು ಮತ್ತು ಅವುಗಳಲ್ಲಿ ಆತಿಥ್ಯ ಭಾಷಣಗಳನ್ನೂ ನೀಡಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದರೂ ಸಾಮಾಜಿಕ ಕ್ಷೇತ್ರದಲ್ಲೂ ಎಲೆ ಮರೆಯ ಕಾಯಿಯಂತೆ ಸೇವೆ ಸಲ್ಲಿಸಿದ್ದಾರೆ. ನಮ್ಮ ದೇಶದ ವಿವಿಧ ಸಂಘ ಸಂಸ್ಥೆಗಳಿಗೆ ಕರ್ಮಯೋಗಿಯಂತೆ ಧನಸಹಾಯ ಮಾಡಿದ್ದಾರೆ. 1962ರ ಭಾರತ, ಚೈನಾ ಯುದ್ಧದ ಸಮಯದಲ್ಲಿ ಆಗಿನ ಕೇಂದ್ರ ವಿತ್ತಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು ಸೂಚಿಸಿದಂತೆ, ಶ್ರೀಯುತರು ತಮಗೆ ದೊರಕಿದ ಬಂಗಾರದ ಪದಕವನ್ನು (10 ಗ್ರಾಂ ತೂಕ) ದೇಶದ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ಸಮರ್ಪಿಸಿದರು. ಶ್ರೀ ಲಕ್ಷ್ಮಣರಾಯರು ಮಾಡುತ್ತಿದ್ದ ಸಾಮಾಜಿಕ ಸೇವೆಗಳನ್ನು ತಮ್ಮ ಹೆಸರು ಎಲ್ಲೂ ಹೊರಬರದಂತೆ ಪೂರ್ವಿಕರ ಹೆಸರಿನಲ್ಲಿ ಮಾಡುತ್ತಿದ್ದರು.

ಶ್ರೀ ಎಸ್.ಕೆ. ಲಕ್ಷ್ಮಣರಾಯರು ಅವಿವಾಹಿತರಾಗಿದ್ದು ನಮ್ಮ ಬೃಹಚ್ಚರಣ ಸಮುದಾಯದ ದಾರ್ಶನಿಕರಾದ ಪೂಜ್ಯ ಡಿ.ವಿ. ಗುಂಡಪ್ಪನವರಲ್ಲಿ 7 ವರ್ಷಗಳ ಕಾಲ ವೇದ ಮತ್ತು ಉಪನಿಷತ್‌ಗಳನ್ನು ಅಭ್ಯಸಿಸಿ, ಅದರಂತೆ ಜೀವನ ನಡೆಸಿದರು. ಶ್ರೀ ಡಿ.ವಿ.ಜಿ.ಯವರಿಗೆ ಶ್ರೀಯುತರು ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು ಮತ್ತು ಡಿವಿಜಿ ಯವರು ಒಮ್ಮೆ 'ನಮ್ಮ ಸಮುದಾಯದಲ್ಲೇ ಲಕ್ಷ್ಮಣರಾಯರು ಅತ್ಯಂತ ಬುದ್ಧಿಶಾಲಿ' ಎಂದು ಹೇಳಿದ್ದರು. ಶ್ರೀ ಲಕ್ಷ್ಮಣರಾಯರ ಗುರುಗಳಾದ ಶ್ರೀ ನಂಜುಂಡಯ್ಯನವರು ಇವರ ಪರಿಶುದ್ಧ ಜೀವನ ಶೈಲಿಯನ್ನು ನೋಡಿ 'ಸಂನ್ಯಾಸಿಗಳೂ ಹೊಟ್ಟೆಕಿಚ್ಚು ಪಡುತ್ತಾರೆ' ಎಂದು ನುಡಿದಿದ್ದರು.

ಪ್ರೊ.ಎಸ್.ಕೆ. ಲಕ್ಷ್ಮಣರಾಯರು ತಮ್ಮ ವಿದ್ಯಾಭ್ಯಾಸ, ವೃತ್ತಿಜೀವನ, ಸಾಮಾಜಿಕ ಬದುಕಿಗೆ ಮಾರ್ಗದರ್ಶನ ಮಾಡಿದ ಪ್ರತಿಯೊಬ್ಬರಿಗೂ ಗುರುವಿನ ಭಾವನೆಯಿಂದ ಕೃತಜ್ಞತಾಪೂರ್ವಕವಾಗಿ ಗುರುದಕ್ಷಿಣೆ ಸಲ್ಲಿಸಿ ಗೌರವಿಸಿದ್ದಾರೆ. ಬಸವನಗುಡಿ ಯಲ್ಲಿರುವ ಒಂದು ವೃತ್ತಕ್ಕೆ, ಬೆಂಗಳೂರು ಮಹಾನಗರ ಪಾಲಿಕೆಯವರು ಇವರ ಸಲಹೆಯಂತೆ, ಇವರ ಪ್ರೀತಿಯ ಗುರುಗಳಾದ ಪ್ರೊಫೆಸರ್ ಬಿ.ಎಸ್. ಮಾಧವ ರಾವ್‌ರವರ ಹೆಸರನ್ನು ನಾಮಕರಣ ಮಾಡಿದ್ದಾರೆ. ಇದು ಶ್ರೀಯುತರು ತಮ್ಮ ಗುರುಗಳಿಗೆ ತೋರುವ ಗೌರವ, ಶ್ರದ್ಧೆ, ಭಕ್ತಿಯನ್ನು ಸೂಚಿಸುತ್ತದೆ. ಇವರ ವಾರಂಗಲ್ ಶಿಷ್ಯವೃಂದ, ನಿವೃತ್ತಿಯಾದಾಗ ಇವರ ಸೇವೆಯನ್ನು ಗುರುತಿಸಿ ಪ್ರಶಂಸಾ ಪತ್ರ ನೀಡಿ ಗೌರವಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಕೆ.ಎಸ್. ಕುಪ್ಪಸ್ವಾಮಿ ಅಯ್ಯಂಗಾರ್ ರವರ ನೆನಪಿನಲ್ಲಿ ಒಂದು ಪ್ರಾಧ್ಯಾಪಕ ಪೀಠವನ್ನು ಶ್ರೀ ಲಕ್ಷ್ಮಣರಾಯರು ಸ್ಥಾಪಿಸಿದ್ದಾರೆ ಮತ್ತು ಪ್ರೊಫೆಸರ್ ಶ್ರೀ ಕೆ. ವೆಂಕಟಾಚಲ ಅಯ್ಯಂಗಾರ್‌ರವರ ಹೆಸರಿನಲ್ಲಿ ಒಂದು ಬಂಗಾರದ ಪದಕವನ್ನು ಉತ್ತಮ ವಿದ್ಯಾರ್ಥಿಗಾಗಿ ಸ್ಥಾಪಿಸಿದ್ದಾರೆ. ಇದು ಶ್ರೀಯುತರಿಗೆ ಗುರು–ಶಿಷ್ಯ ಸಂಬಂಧದಲ್ಲಿದ್ದ ಅದ್ಭುತ ಪ್ರೇಮವನ್ನು ತೋರಿಸುತ್ತದೆ. ಬಸವನಗುಡಿಯ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದಲ್ಲಿ ಪ್ರತೀ ಸೋಮವಾರಗಳಂದು ಮತ್ತು ಪ್ರತೀ ಪ್ರದೋಷ ದಿನಗಳಂದು (1954ರಿಂದ 2004ರ ವರೆಗೆ ಬೆಂಗಳೂರಿನಲ್ಲಿದ್ದಾಗಲೆಲ್ಲಾ) ಸತತವಾಗಿ, ನಡೆಯುವ ಏಕವಾರ ರುದ್ರಾಭಿಷೇಕಕ್ಕೆ ಸಾಮೂಹಿಕ ರುದ್ರಪಠನಗಳಲ್ಲಿ ಭಾಗವಹಿಸುತ್ತಿದ್ದರು. ಶ್ರೀ ಎಸ್.ಕೆ. ಲಕ್ಷ್ಮಣರಾಯರ ಭಾಷಾಸಕ್ತಿ ಹೇಗಿತ್ತೆಂದರೆ ಸಂಸ್ಕೃತ ಭಾಷೆಯ ಮೇಲಿನ ಪ್ರಾಬಲ್ಯದೊಂದಿಗೆ, ವಿದೇಶೀ ಭಾಷೆಯಾದ ರಷ್ಯನ್, ಫ್ರೆಂಚ್, ಜರ್ಮನ್‌ನನ್ನು ಕಲಿತಿದ್ದರು. ಕರ್ನಾಟಕ ಸಂಗೀತದಲ್ಲೂ ಅತೀವ ಆಸಕ್ತಿ ಹೊಂದಿದ್ದರು. ಬೆಂಗಳೂರಿನ ಗಾಯನ ಸಮಾಜದಲ್ಲಿ ತಮ್ಮ ಮಾತಾಪಿತೃಗಳ ಹೆಸರಿನಲ್ಲಿ ಮತ್ತು ಪೂಜ್ಯ ಡಿವಿಜಿಯವರ ಹೆಸರಿನಲ್ಲಿ ಸಂಗೀತ ಕಾರ್ಯಕ್ರಮಗಳಿಗೆ ದತ್ತಿ ಸ್ಥಾಪಿಸಿದ್ದಾರೆ. ಇಂತಹ ಮಹಾನ್ ವ್ಯಕ್ತಿ ದಿನಾಂಕ 24.11.2007ರಂದು ನಮ್ಮನ್ನಗಲಿದರು. ಇವರನ್ನು ಜೀವಿತ ಕಾಲದಲ್ಲಿ ದರ್ಶಿಸಿ, ಇದರೊಂದಿಗೆ ಒಡನಾಡಿದವರೇ ಭಾಗ್ಯವಂತರು, ಅದೃಷ್ಟಶಾಲಿಗಳು. ಶ್ರೀಯುತರ ಇಂತಹ ನಿಷ್ಪಕ್ಷತೆಯ ಬಾಳಿನ ರೀತಿ ಎಲ್ಲರಿಗೂ ಮಾದರಿಯಾಗಬೇಕು.



*–ರಾ. ರಮೇಶ್*
*9886034048*

## ನಾ ಕಂಡ ಸಮುದಾಯದ ಅಪರೂಪ ವ್ಯಕ್ತಿತ್ವದ ಸ್ಮರಣೀಯರು

ಬೃಹಚ್ಚರಣ ಸಮುದಾಯ ಒಂದು ಭೂಮಂಡಲಾಕಾರದಂತೆ ವಿಶ್ವದ ನಾನಾ ಭಾಗಗಳಲ್ಲಿ ಸಂಗೀತ, ಸಾಹಿತ್ಯ, ಕಲೆ ಮತ್ತು ವಿಜ್ಞಾನದ ಆವೃತ್ತಗಳಲ್ಲಿ ಸಂಶೋಧಕರು ಮತ್ತು ಪ್ರಬಂಧಕಾರರಾಗಿ ತಮ್ಮ ಉನ್ನತ ಪ್ರತಿಭೆಯನ್ನು 1938ನೇ ಇಸವಿಯಿಂದಲೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅವರ ಪ್ರತಿಭೆಯ ಸಾಮ್ರಾಜ್ಯವನ್ನು ಸ್ಥಾಪಿಸಿರುತ್ತಾರೆ. ಅಂತಹ ಸರಳ ವ್ಯಕ್ತಿತ್ವದಲ್ಲಿ ಶ್ರೀಯುತ ಎಸ್. ಕೃಷ್ಣಸ್ವಾಮಿಗಳು (ಡಿವಿಜಿಯವರ ಅಳಿಯಂದಿರು), ಅರೇಹಳ್ಳಿ ಮುನೀಶ್ವರಯ್ಯನವರು (ಇಂಜಿನಿಯರ್), ಡಾಕ್ಟರ್ ಎಸ್. ರಾಮಸ್ವಾಮಿ ಅಯ್ಯರ್, ಡಾ.ಎಸ್.ಎಲ್. ಗೋಪಾಲಸ್ವಾಮಿ (ಎಂ.ಡಿ.ಪಿ.ಯನ್ನು) ಡಾ. ದಾನಪ್ಪ ಇವರುಗಳು ಇಂಗ್ಲಿಷ್ ಕಲೋನಿಯಲ್ ಪ್ರಾಂತ್ಯದ ವೈದ್ಯರುಗಳು ಡಾ. ಜಗದಾಪೂರ್ ಎಸ್.ವೇಣುಗೋಪಾಲ್ (ಆಹಾರ ವಿಜ್ಞಾನಿಗಳು) ಮತ್ತು ಕರ್ಪೂರ್ ಬಿದರೆಗೆರೆ ನಾಗರಾಜ್ (ತತ್ವಶಾಸ್ತ್ರದಲ್ಲಿ ಪಂಡಿತರು). ನಾನು ತೀರ ಹತ್ತಿರ ಕಂಡಿದ್ದು ನನ್ನ ಪೂಜ್ಯ ತಾತನವರಾದ ಡಾ. ಎಸ್. ರಾಮಸ್ವಾಮಿ ಅಯ್ಯರ್, ಬ್ರಿಟಿಷ್ ಇಂಡಿಯ ಸರ್ಕಾರದ ಸರ್ಕಾರಿ ವೈದ್ಯರು ಮತ್ತು ಜಗದಾಪುರ್ ವೇಣುಗೋಪಾಲ್ (ಭೂಗರ್ಭ ವಿಜ್ಞಾನಿ) ಅವರುಗಳ ವಿಚಾರಾತೀತ, ದೈವಾತೀತ, ಪ್ರೇರಕತತ್ವ, ಶಕ್ತಿಗಳು ಅವರುಗಳ ಸಂಕೇತಕ. ಸರಳತನ, ಸೌಹಾರ್ದ ಸೇರುವಿಕೆ ಪ್ರೀತಿ ಮತ್ತು ಸೃಜನಶೀಲತೆ ಸಮಚಿತ್ತ ವೆಲ್ಲವೂ ಇಂದಿಗೂ ಪರಿಪೂರ್ಣ ಕರ್ಮಯೋಗಿಗಳೆಂದು ಬಿಂಬಿಸುತ್ತದೆ. ವಿಪರ್ಯಾಸ ವೆಂದರೆ, ಇತ್ತೀಚಿನ ಯುವಜನಾಂಗದಲ್ಲಿ ತಾಂತ್ರಿಕತೆಯು ಬದಲಲ್ಲಿ ಬರಲಿಲ್ಲ. ಪ್ರೀತಿ ಮತ್ತು ಸಂಪರ್ಕಗಳು ಅಗೋಚರಿಸಿರುವುದು ಶೋಚನೀಯ. ಮಹಾನ್ ವ್ಯಕ್ತಿಗಳು ತಮ್ಮ ಪರಂಪರೆ ಮತ್ತು ದೃಢಸಂಕಲ್ಪದಲ್ಲಿ ನಾಡು ಮತ್ತು ದೇಶಕ್ಕೆ ಸಲ್ಲಿಸಿರುವ ಸೇವೆ ಮತ್ತು ಕುರುಹುಗಳು ಇಂದಿಗೂ ಸ್ಮರಣೀಯ ಮತ್ತು ನಮ್ಮ ಬೃಹಚ್ಚರಣದ ಮಕ್ಕಳಲ್ಲಿ ಈ ಪರಿಸರದಲ್ಲಿಯ ಅಭೂತಶಕ್ತಿ ಮತ್ತು ಹಿರಿಯರ ಸಂಸ್ಕಾರಗಳು ಮತ್ತು ಅವರ ಆಲೋಚನಾ ಲಹರಿಯು ಸದಾ ಬ್ರಹ್ಮಜ್ಞಾನಿತರಾಗಲು ವಿಜೃಂಭಿಸಿ ಚೈತನ್ಯ ಬರಲೆಂದು ಹಾರೈಸುವ ಶುಭಾಷಿತದ ಕೊಡುಗೆ.

**ಸೇಲಂ ವಿ. ಸುಬ್ರಮಣ್ಯಂ (ಬೇಬಿ)**




# ಬೃಹಚ್ಚರಣ 4 x 4

ದಿನಾಂಕ 3.10.2010ರಂದು ನಾಗಕ್ಷೇತ್ರ ಕಿತ್ತಗಾನಹಳ್ಳಿಯಲ್ಲಿ ನಡೆದ ಸರ್ವಸದಸ್ಯರ ಸಭೆಯು, ಬೃಹಚ್ಚರಣ ಸಮುದಾಯದಿಂದ ತ್ರೈಮಾಸಿಕ ವಾರ್ತಾ ಪತ್ರಿಕೆಯನ್ನು ಹೊರತರಲು ತೀರ್ಮಾನಿಸಿತು. ಸಂಘದ ಅಧ್ಯಕ್ಷ ಶ್ರೀ ಎಸ್. ಸೋಮಸುಂದರ ಅವರ ಪ್ರಧಾನ ಸಂಪಾದಕತ್ವದಲ್ಲಿ ಜುಲೈ 2011ರಂದು ಪ್ರಥಮ ಸಂಚಿಕೆಯು ನಮ್ಮ ಸಮುದಾಯದ ಹಿರಿಯ ಶ್ರೀ ಡಿ.ವಿ.ಜಿ. ಅವರಿಗೆ ಅರ್ಪಿಸುವ ಮೂಲಕ ಪ್ರಾರಂಭಿಸಲ್ಪಟ್ಟಿತು. ಶ್ರೀ ಕೆ.ಎಸ್. ಮಧುಸೂದನ್ ರವರ ಸಂಪಾದಕತ್ವದಲ್ಲಿ ಮೊದಲ ಸಂಚಿಕೆಯನ್ನು ಚಿತ್ರರಂಗದ ದಿಗ್ಗಜ, ಶ್ರೀ ಎಸ್. ಶಿವರಾಂರವರು ದಿನಾಂಕ 28.08.2010ರಂದು ಬಿಡುಗಡೆ ಮಾಡಿದರು. ಈಗ ನಮ್ಮ ಹೆಮ್ಮೆಯ 'ಬೃಹಚ್ಚರಣ' ಪತ್ರಿಕೆಗೆ 4 ವರ್ಷಗಳು ತುಂಬಿದ್ದು, 16 ತ್ರೈಮಾಸಿಕ ವಾರ್ತಾಸಂಚಿಕೆಗಳನ್ನು ಕಾರ್ಯಕಾರಿ ಸಮಿತಿಯ ಸಲಹೆಯಂತೆ ಸಮುದಾಯದ 16 ಗಣ್ಯರಿಗೆ ಅರ್ಪಿಸಲಾಗಿದೆ. ಉತ್ತಮ ಸಲಹೆ, ವಿಮರ್ಶೆಗಳನ್ನು ಅಳವಡಿಸಿಕೊಂಡಿರುವ ನಿಮ್ಮ ಪತ್ರಿಕೆಯು, ಎಲ್ಲರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದೆ. ಈ ಪತ್ರಿಕೆಗೆ ಪ್ರತ್ಯಕ್ಷ, ಪರೋಕ್ಷವಾಗಿ ಸಹಕಾರ ನೀಡುತ್ತಿರುವ ಎಲ್ಲರಿಗೂ ಸಂಪಾದಕ ಮಂಡಲಿ ಆಭಾರಿಯಾಗಿದೆ. ಉತ್ತಮ ಲೇಖನಗಳು, ಚಿತ್ರಗಳು, ವಿವಿಧ ಪ್ರಾಕಾರಗಳಲ್ಲಿ ಪ್ರಕಟಗೊಳ್ಳುತ್ತಿದ್ದು ಅಂದವಾಗಿ ಮುದ್ರಣ ಮಾಡುತ್ತ ಬಂದಿರುವ ಇಳಾ ಮುದ್ರಣದ ಶ್ರೀ ಗುರುಮೂರ್ತಿ ಹಾಗೂ ಸಿಬ್ಬಂದಿ ವರ್ಗದವರಿಗೂ, ಛಾಯಾಚಿತ್ರಗಳನ್ನು ಪರಿಷ್ಕರಿಸಿ ನೀಡುತ್ತಿರುವ ಶ್ರೀ ಎನ್. ಶಿವಕುಮಾರ್‌ರವರಿಗೂ ಹಾಗೂ ಪ್ರತಿಯೊಬ್ಬ ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ಸಂಪಾದಕ ಮಂಡಲಿಯ ಕೃತಜ್ಞತೆಗಳು.

**ಸಂಪಾದಕ**

## ನೆನಪಿನಂಗಳದಿಂದ : ಛಾಯಾಚಿತ್ರ - ೨೩



ಶ್ರೀಮತಿ ರುಕ್ಮಿಣಿ (ಬಿನ್ನಮಂಗಲ ಶ್ರೀಮತಿ ಮತ್ತು ಶ್ರೀ ವೆಂಕಟಗಿರಿಯಪ್ಪನವರ ಪುತ್ರಿ) ಹಾಗೂ ಶ್ರೀ ಕೆ.ಜಿ. ಶ್ರೀನಿವಾಸ್, (ಕಾಚರಕನಹಳ್ಳಿ ಶ್ರೀಮತಿ ಶ್ರೀ ಗೋಪಾಲಯ್ಯನವರ ಪುತ್ರ) 23.06.1965ರಲ್ಲಿನ ಮದುವೆ ಸಮಾರಂಭದ ಚಿತ್ರ

# ಪೂರ್ಣಕುಂಭ ಸ್ವಾಗತ

ಯಾವುದೇ ವಿಶೇಷ ಆಧ್ಯಾತ್ಮಿಕ, ಧಾರ್ಮಿಕ ಕಾರ್ಯಕ್ರಮಗಳಿಗೆ ಆಗಮಿಸುವ ಅತಿಥಿಗಳನ್ನು, ಅಭ್ಯಾಗತರು ಪೂರ್ಣಕುಂಭದೊಂದಿಗೆ ಸ್ವಾಗತ ಮಾಡಿ ಆಹ್ವಾನಿಸುವುದು ಭಾರತೀಯ ಸನಾತನ ಸಂಸ್ಕೃತಿಯ ಪದ್ಧತಿಯಲ್ಲಿ ಬೆಳೆದು ಬಂದಿದೆ. ವೇದಘೋಷದೊಂದಿಗೆ ಅತಿಥಿ ಬರುವ ಮಾರ್ಗದಲ್ಲಿ ಪೂರ್ಣಕುಂಭವನ್ನು ಹಿಡಿದು ಸ್ವಾಗತ ಮಾಡುತ್ತಾರೆ. ಇದು ನಮಗೆ ಹೊರಗೆ ಕಂಡುಬರುವ ದೃಶ್ಯ, ಶ್ರಾವ್ಯ, ಇದರ ಅಂತರಾರ್ಥವನ್ನು ತಿಳಿಯಲು ಸ್ವಲ್ಪ ಪ್ರಯತ್ನಿಸೋಣ.

ಪೂರ್ಣಕುಂಭದ ಕಳಶದಲ್ಲಿ ಮಾವಿನಗುತ್ತಿ, ತೆಂಗಿನಕಾಯಿ, ಕಳಶದಲ್ಲಿ ನೀರು, ಅದಕ್ಕೆ ಮಂಗಳದ್ರವ್ಯ ತಟ್ಟೆಯಲ್ಲಿ ಅಕ್ಕಿ ಹಾಕಿ ಕಳಶಕ್ಕೆ ಶೃಂಗರಿಸಿರುತ್ತಾರೆ. ಪೂರ್ಣಕುಂಭವು ನಮ್ಮ ಸ್ಥೂಲ ಶರೀರವನ್ನು ಪ್ರತಿನಿಧಿಸುತ್ತದೆ. ಮಾವಿನ ಗುತ್ತಿಯ ಐದು ಎಲೆಗಳು ನಮ್ಮ ಪಂಚ ಜ್ಞಾನೇಂದ್ರಿಯಗಳಾದ ಮತ್ತು ಅವುಗಳ ತನ್ಮಾತ್ರಗಳನ್ನು ಅಂದರೆ ಕಿವಿ (ಶಬ್ದ), ಚರ್ಮ(ಸ್ಪರ್ಶ), ಕಣ್ಣು (ರೂಪ) ನಾಲಿಗೆ (ರಸ), ಮೂಗು (ಗಂಧ) ಇವುಗಳನ್ನು ಸೂಚಿಸುತ್ತದೆ. ಈ ಜ್ಞಾನೇಂದ್ರಿಯಗಳು ಮುಖ್ಯವಾಗಿ ಶರೀರದ ಶ್ರೇಷ್ಠ ಭಾಗವಾದ ಶಿರಭಾಗದಲ್ಲಿರುತ್ತದೆ. ಇದರ ಮೂಲಕವೇ ನಾವು ಪ್ರಾಪಂಚಿಕ ವಿಷಯಗಳನ್ನು ಗ್ರಹಿಸುವುದು. ಕಳಶದ ಕೆಳಗಿರುವ ಅಕ್ಕಿಯು ಸೂಕ್ಷ್ಮ ಶರೀರವಾದ ಅಂತಃಕರಣ ವೃತ್ತಿಯಾದ ಮನಸ್ಸಿನ ಕುರುಹು. ನವಗ್ರಹ ಸಾಮಗ್ರಿಗಳಲ್ಲಿ ಚಂದ್ರನನ್ನು ಅಕ್ಕಿಯ ಮೂಲಕ ಆವಾಹನೆ ಮಾಡುತ್ತಾರೆ. 'ಚಂದ್ರಮಾ ಮನಸೋ ಜಾತಃ' ಎಂಬುದನ್ನು ಇಲ್ಲಿ ಸ್ಮರಿಸಬೇಕು.

ಎಲೆಯ ಮಧ್ಯೆ ಇಡುವ ತೆಂಗಿನಕಾಯಿಯು ಜ್ಞಾನಫಲದ ಗುರುತು. ಕಲ್ಪವೃಕ್ಷವಾದ ತೆಂಗಿನಮರದ ಭಾಗವಾದ ತೆಂಗಿನಕಾಯಿಯೂ ಯಾವುದೇ ಜೀವಿಯ (ಪ್ರಾಣಿ, ಪಕ್ಷಿ, ಮಾನವ) ಉಚ್ಛಿಷ್ಟ (ಎಂಜಲು) ಇಲ್ಲದೆ ಪವಿತ್ರವಾಗಿರುವುದರಿಂದ ದೇವರ ನೈವೇದ್ಯಕ್ಕೆ ಯೋಗ್ಯ ತೆಂಗಿನಮರದ ಇನ್ನೊಂದು ವಿಶೇಷವೇನೆಂದರೆ ನಿಸರ್ಗವೇ ಮಾಡಿಕೊಂಡಿರುವ natural pump ತೆಂಗಿನಕಾಯಿಯ ಒಳಗಿರುವ ಎಳನೀರು ನಮ್ಮೊಳಗಿರುವ ಆತ್ಮ ಚೈತನ್ಯದ ಸಂಕೇತ. ಕಳಶದ ಒಳಗೆ ಹಾಕುವ ಮಂಗಳ ದ್ರವ್ಯಗಳು ಸದಾ ಶುಭ ಚಿಂತನೆಯಲ್ಲೇ ಇರಬೇಕೆಂದು ತಿಳಿಸುತ್ತದೆ.

ಕಳಶವನ್ನಿಟ್ಟಿರುವ ತಟ್ಟೆ ಪೃಥ್ವಿಯಾದರೆ, ಅದರಲ್ಲಿರುವ ಧಾನ್ಯವಾದ ಅಕ್ಕಿಯು, ಪೃಥ್ವಿಯ ಮೂಲಕ ಬಂದ ಆಹಾರವಾಗುತ್ತದೆ. ಇದನ್ನು ಸೇವಿಸಿ ಬೆಳೆಯುವುದೇ ಈ ಸ್ಥೂಲ ಶರೀರ. ಇದರೊಳಗಿನ ನೀರು ಪವಿತ್ರ ಗಂಗೆಯಂತೆ ಜ್ಞಾನವನ್ನು ಪ್ರತಿನಿಧಿಸುತ್ತದೆ. ಹಸಿರೆಲೆಯು ಎಂದೆಂದೂ ನಳನಳಿ ಸುವಂತೆ, ಜ್ಞಾನೇಂದ್ರಿಯಗಳು ಜೀವಿತ ಕಾಲದುದ್ದಕ್ಕೂ ಜ್ಞಾನ ಸಂಪಾದನೆಗೆ ಬಳಕೆಯಾಗಬೇಕು. ತೆಂಗಿನಕಾಯಿಯ ಹೊರ ಕವಚ ಗಟ್ಟಿಯಾಗಿದ್ದು, ಹೊರಗೆ ಕಾಣುವ ಜಡ, ಸ್ಥೂಲ ಶರೀರದಂತೆಯೂ ಒಳಗಿನ ಕಾಯಿಯ ಭಾಗ ಮೃದುವಾಗಿ ಸೂಕ್ಷ್ಮಶರೀರವಾದ ಅಂತಃಕರಣದಂತೆಯೂ ಅದಕ್ಕೂ ಒಳಗಿನ ತೆಂಗಿನ ನೀರು ರುಚಿಯಾಗಿ, ಶುಚಿಯಾಗಿ, ತಣ್ಣಗೆ ಇದ್ದು ಕಾರಣ ಶರೀರವಾದ ಭಾವನೆಯನ್ನು ಪ್ರತಿನಿಧಿಸುವಂತಿರುತ್ತದೆ. ಕಳಶಕ್ಕೆ ಮಾಡುವ ಶೃಂಗಾರವು ಸಾಧನೆಗಾಗಿರುವ ಶರೀರವನ್ನು ಸುಸ್ಥಿತಿಯಲ್ಲಿ, ಆರೋಗ್ಯವಾಗಿಟ್ಟು ಕೊಳ್ಳಬೇಕೆಂಬುದನ್ನು ತೋರಿಸುತ್ತದೆ. ವೇದಘೋಷವು ಮಾನವ ಜೀವನವು ಬರೀ ಜೀವನೋಪಾಯ ಮಾತ್ರವಲ್ಲದೆ ಆತ್ಮೋಪಾಯವನ್ನು ಕಂಡುಕೊಳ್ಳ ಬೇಕೆಂದು ಕೂಗಿ ಕೂಗಿ ಹೇಳುತ್ತದೆ.

'ಶರೀರ ಮಾಧ್ಯಮಂ ಖಲು ಧರ್ಮ ಸಾಧನಂ' ಎಂಬಂತೆ, ಇಂತಹ ಪೂರ್ಣಕುಂಭದ ಸಂಕೇತವಾದ ಶರೀರವು ಧರ್ಮಸಾಧನೆಗಾಗಿ ಬಳಕೆ ಯಾಗಬೇಕು. ಈ ರೀತಿ ಬರುವ ಅತಿಥಿಗಳು ತಮ್ಮದೇ ಆದ ಸನ್ಮಾರ್ಗದಲ್ಲಿ ನಡೆದು ಭಗವತ್ ಪ್ರೀತಿಗೆ ಪಾತ್ರರಾಗಿರುತ್ತಾರೆಂದು ಭಾವಿಸಿ, ನಾವೂ ಅದರಂತೆಯೇ ಈ ಶರೀರವನ್ನು ಸನ್ಮಾರ್ಗದತ್ತ ಕೊಂಡೊಯ್ಯಲು ಪ್ರಯತ್ನಿಸಬೇಕು. ಮಾರ್ಗವು ಕರ್ಮ, ಭಕ್ತಿ, ಜ್ಞಾನ ಯಾವುದಾದರೂ, ತಲುಪುವ ಗುರಿಯು ಮಾತ್ರ ಪರಮಾತ್ಮನೇ ಆಗಿರಬೇಕು.



■ ಲಲಿತಾ ರಮೇಶ್
9945199637

# ನಾಗೇಶ್ವರ ಕ್ಷೇತ್ರದಲ್ಲಿ ಸಾಮೂಹಿಕ ಉಪಾಕರ್ಮ









ಪ್ರತಿವರ್ಷದಂತೆ ತಾ.29.08.15ನೇ ಶನಿವಾರದಂದು ಕಿತ್ತಿಗಾನಹಳ್ಳಿಯ ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ಸಾಮೂಹಿಕ ಉಪಾಕರ್ಮ ಶಾಸ್ತ್ರೋಕ್ತವಾಗಿ ನೆರವೇರಿತು.

ಉಪಾಕರ್ಮದಲ್ಲಿ ಆಸುಪಾಸಿನ ವಿಪ್ರಬಂಧುಗಳು ಹಾಗೂ ಬೃಹಚ್ಚರಣ ಮಿತ್ರರು ಸುಮಾರು 200ಕ್ಕೂ ಹೆಚ್ಚು ಸಂಖ್ಯೆಯಲ್ಲಿ ತಮ್ಮ ಕುಟುಂಬ ಸಮೇತ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಯಾಗಲು ನೆರವಾದರು.

ಈ ಕಾರ್ಯಕ್ರಮವನ್ನು ಆಯೋಜಿಸಿದ ಆನೇಕಲ್ ತಾಲ್ಲೂಕಿನ ಸಹೃದಯ ವಿಪ್ರವೃಂದ ಎಲ್ಲ ಕಾರ್ಯಕರ್ತರಿಗೆ ಮೈ.ಮಂ.ದ್ರಾ.ಬೃ.ಸಂಘವು ಆಭಾರಿಯಾಗಿದೆ.

**–ವಿ.ಎಸ್. ಮಣಿ**

# ಚಿಣ್ಣರ ಅಂಗಳ




ನಂಗೆ ಸಂಗೀತ ಅಂದ್ರೆ ಬಲು ಇಷ್ಟ, ಅದರಲ್ಲೂ ಕೊಳಲು ನುಡಿಸೋದು ಅಂದ್ರೆ ಪಂಚಪ್ರಾಣ. ಮನೇಲಿ ಪ್ರಾಕ್ಟೀಸ್ ಮಾಡೋಣ ಅಂದ್ರೆ, ನಮ್ಮನೇಯೋರು 'ಅಯ್ಯೋ ನಿನ್ನ ಪಿಳ್ಳಂಗೋವಿ ಕರ್ಕಶ ಶಬ್ದ ಕೇಳೋಕಾಗೊಲ್ಲಾ ಎಲ್ಲಾನ ಆಚೆ ತೊಲಗಿ ಬಾರಿಸ್ಕೋ' ಅಂತಾರೆ. ಈ ಕೊಳಲಿನ ಮಹತ್ವ 'ಏನೂ' ಅಂತ ನಮ್ ದೇಶದೋರಿಗೆ ಗೊತ್ತಿಲ್ಲ. ಇದರ ಮಹತ್ವ ಗೊತ್ತಾಗೋಕೆ ಭಾರತಕ್ಕೆ ಹೋಗಬೇಕು. ಅಲ್ಲಿ 'ಶ್ರೀಕೃಷ್ಣ' ಅನ್ನೋ ದೇವರಿದ್ದಾನೆ. ಅವನಿಗೆ ಕೊಳಲು ಅಂದ್ರೆ ಬಲು ಪ್ರೀತಿ, ಸದಾ ನುಡಿಸ್ತಾ ಇರ್ತಾನೆ. ಈ ಪಿಳ್ಳಂಗೋವಿಯ ಮೇಲೆ ನೂರಾರು ಹಾಡುಗಳು, ಕೀರ್ತನೆಗಳು ಇವೆಯಂತೆ. ಇವನ್ನೆಲ್ಲಾ ಕೊಳಲಲ್ಲಿ ನುಡಿಸಿ ಅಥವಾ ಹಾಡು ಹೇಳಿ ಶ್ರೀಕೃಷ್ಣನನ್ನು ಆರಾಧಿಸ್ತಾರೆ. ಅದು ಆ ದೇಶದ ಸಂಪ್ರದಾಯ. ಇದೆಲ್ಲಾ ನಮ್ ಮನೆಯವರಿಗೆ,ಈ ದೇಶದವರಿಗೆ ಏನ್ ಗೊತ್ತು. ಭಾರತದ ಕರ್ನಾಟಕ ರಾಜ್ಯದ ಉಡುಪಿ ಊರಲ್ಲಿ ಶ್ರೀಕೃಷ್ಣನ ಮಠ ಇದೆಯಂತೆ, ಒಂದ್ಸಾರಿ ಅಲ್ಲಿ ಹೋಗಿ ಪಿಳ್ಳಂಗೋವಿ ಬಾರಿಸಬೇಕು ಅಂತ ನನ್ನ ಜೀವಮಾನದ ಆಸೆ. ಅದ್ಯಾವಾಗ ಈಡೇರುತ್ತೋ ಗೊತ್ತಿಲ್ಲ.

ಸರಿ, ಸಧ್ಯಕ್ಕೆ ನೀನೆ ನನ್ನ ಪಿಳ್ಳಂಗೋವಿಯ ಸಂಗೀತ ಕೇಳ್ಬೇಕು. ಅದು ಹ್ಯಾಗಾದ್ರು ಇರ್ಲಿ ನೀನು ಕೇಳದೆ ಬೇರೆ ದಾರಿನೇ ಇಲ್ಲ. ನೀನು ನನ್ನ ಸಂಗೀತ ಕೇಳಿದ್ರೇನೇ ನಿಂಗೆ ಊಟ. ನಂಗೆ ಗೊತ್ತು ನಾನು ಕೊಡೋ ಊಟಕ್ಕಾದ್ರು ನೀನು ಬಾಯ್ ಮುಚ್ಕೋಂಡು ಮಿಯಾವ್ ಮಿಯಾವ್ ಅನ್ನದೆ ನನ್ ಸಂಗೀತ ಕೇಳ್ತೀಯಾ ಅಂತಾ.

ನಾನು ದೊಡ್ಡೋನು ಆದ್ಮೇಲೆ ಚನ್ನಾಗಿ ಕೊಳಲು ನುಡಿಸೋದು ಕಲ್ತ್ಕೊಂಡು 'ಉಡುಪಿ'ಗೆ ಹೋಗ್ತೀನಿ, ಬರೋದಾದ್ರೆ ನಿನ್ನೂ ಕರ್ಕೊಂಡು ಹೋಗ್ತೀನಿ.

ಅಲ್ಲಿ ಕರ್ನಾಟಕದೋರು ಕನ್ನಡದಲ್ಲಿ ನಿನ್ಮೇಲೂ ಒಂದು ಪುಟ್ಟ ಗೀತೆ ಬರೆದಿದ್ದಾರೆ. ಅದೇ.... ಇಲ್ಲಿ ನಾವು "ಪುಸಿ ಕ್ಯಾಟ್ ಪುಸಿ ಕ್ಯಾಟ್ ವೇರ್ ಹ್ಯಾಡ್ ಯು ಬೀನ್...?" ಅನ್ನೋ ತರಾನೇ "ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ ಎಲ್ಲಿಗೆ ಹೋಗಿದ್ದೇ...?" ಅನ್ನೋ ಪದ್ಯ ಇದೆ. ಆಹಾ, ಇವಾಗ ನಿಂಗೂ ಖುಷಿ ಆಗಿರ್ಬೇಕಲ್ವಾ....? ಯೋಚನೆ ಮಾಡ್ಬೇಡ ನಿನ್ನೂ ಕರ್ಕೊಂಡು ಹೋಗ್ತೀನಿ. ಆದ್ರೆ ಅಲ್ಲಿ ಬೀದೀ ನಾಯಿಗಳು ಇರುತ್ತೆ, ನೀನು ಸ್ವಲ್ಪ ಹುಷಾರಾಗಿರ್ಬೇಕು ಅಷ್ಟೇ. ನಿಂಗೆ ಪಾಸ್ಪೋರ್ಟ್ ಇಲ್ಲ, ಅದನ್ನೂ ಮಾಡಿಸ್ತೀನಿ. ಸರಿ, ಇವಾಗ ಯಾವ್ ಹಾಡು ಬಾರ್ಸಿಲೀ....? ನೀನೇ ಹೇಳು, ನಂಗೆ ಹ್ಯಾಗ್ ಬರುತ್ತೋ ಹಾಗೆ ಬಾರ್ಸ್ತೀನಿ ಸರೀನಾ....?

ಬಾಯ್ ಮುಚ್ಕ್ಕೊಂಡು ಕೇಳಿಸ್ಕೊ ಮಧ್ಯದಲ್ಲಿ ಮಿಯಾವ್ ಅಂತ ಶಬ್ದ ಮಾಡಿ ಡಿಸ್ಟರ್ಬ್ ಮಾಡಬೇಡ.



■ವಿ.ಎಸ್.ಮಣಿ
98450 55582




ಸಮರ್ಥ ಆರ್.

## ಜ್ಯೋತಿ



ಹಚ್ಚ ಬನ್ನಿ ದೀವಿಗೆ
ಬೆಳಕ ಕಾಣೊ ನಾಳೆಗೆ ॥

ಅಜ್ಞಾನದ ಕತ್ತಲೆ
ದೂಡುತಲಿ ಆಚೆಗೆ
ಜ್ಞಾನವೆಂಬ ಜ್ಯೋತಿಗೆ
ಮಾನವತೆಯ ಪ್ರೀತಿಗೆ ॥

ನೀತಿ ಸಹನೆ, ತಾಳ್ಮೆಗೆ
ಎಚ್ಚರಿಸುವ ಕ್ರಾಂತಿಗೆ
ಎಲ್ಲರ ಸಹಬಾಳ್ವೆಗೆ
ಸಕಲ ವಿಶ್ವಶಾಂತಿಗೆ ॥

ಶುಭ ಗಾಯತ್ರಿ


## ನವರಾತ್ರಿಯ ಬೊಂಬೆ ಮನೆ

ಸಮುದಾಯದಲ್ಲಿ ಕಲಾವಿದರಿಗೆ ಕೊರತೆಯಿಲ್ಲ. ಅಲಂಕಾರ ಮಾಡುವುದು ಒಂದು ಕಲೆ. ಅದನ್ನು ಕಲಾದೃಷ್ಟಿಯಿಂದ ನೋಡಿ ಆನಂದಿಸುವುದೂ ಒಂದು ಕಲೆ. ಈ ಪೀಠಿಕೆ ಏಕೆಂದರೆ, 'ವಾಟ್ಸ್‌ಆಪ್' ಹಾಗೂ 'ಫೇಸ್‌ಬುಕ್'ನಲ್ಲಿ ನಮ್ಮವರು ನವರಾತ್ರಿ ಹಬ್ಬದ ಪ್ರಯುಕ್ತ ಅಲಂಕಾರಿಕ ಬೊಂಬೆಗಳನ್ನು ಅತ್ಯಂತ ಆಕರ್ಷಕವಾಗಿ ಜೋಡಿಸಿದ ಛಾಯಾಚಿತ್ರಗಳನ್ನು ಪ್ರಕಟಿಸಿ ಎಲ್ಲರಿಂದಲೂ ಮೆಚ್ಚುಗೆ ಪಡೆದಿರುತ್ತಾರೆ. ಸಮುದಾಯದ ಪ್ರತಿ ಕುಟುಂಬವೂ ದಸರಾ ಹಬ್ಬವನ್ನೂ ಅತ್ಯಂತ ಪಾರಂಪರಿಕ-ಧಾರ್ಮಿಕತೆಯಿಂದ ನಮ್ಮ ಪದ್ಧತಿಯನ್ನು ಬಿಂಬಿಸುವಂತೆ ಜೋಡಿಸಿರುವುದು ಸಂತಸ ತಂದಿರುವುದರಿಂದ ನಮ್ಮ ಪ್ರಧಾನ ಸಂಪಾದಕರಾದ ಶ್ರೀ ಸೋಮಸುಂದರ ಅವರು ಈ ಬಗ್ಗೆ ಮುಂದಿನ ವರ್ಷದ ಸಾಂಪ್ರದಾಯಕ ದಸರಾ ಹಬ್ಬದಲ್ಲಿ ಬೊಂಬೆ ಕೂರಿಸುವುದರ ಬಗ್ಗೆ ಆಯ್ದ ಲೇಖನ, ಛಾಯಾಚಿತ್ರಗಳನ್ನು "ಬೃಹಚ್ಚರಣ" ಸಂಚಿಕೆಯಲ್ಲಿ ಪ್ರಕಟಿಸಿರುವ ಸೂಚನೆ ನೀಡಿದ್ದಾರೆ. ಉತ್ತಮ, ಕಲಾತ್ಮಕವಾಗಿ ಬೊಂಬೆ ಕೂಡಿಸಿರುವವರಿಗೆಲ್ಲಾ ಸಂಘ ಅಭಿನಂದಿಸಿ, ಶುಭ ಹಾರೈಸುತ್ತದೆ.

■ರಮ್ಯ ಪರಮೇಶ್



## ಹತ್ತು ವ್ಯತ್ಯಾಸ ಕಂಡುಹಿಡಿದು ಬಣ್ಣ ತುಂಬಿರಿ



■ಡಿ. ಗೋವಿಂದರಾವ್
94825 36048

## ನಗೆ ಹನಿಗಳು

ಮದುವೆಯಾಗಿ ಮನೆ ತುಂಬಿಸಿಕೊಂಡ ಸಾಫ್ಟ್‌ವೇರ್ ಸೊಸೆಗೆ ಅಡಿಗೆ ಮಾಡೋಕೆ ಬರಲ್ಲ ಅಂತ ಅತ್ತೆ ದಿನಾ ದೂರುತ್ತಿದ್ದಳು. ಕೊನೆಗೊಂದು ದಿನ ಸೊಸೆ ಒಂದು ಅಡುಗೆ ಪುಸ್ತಕ ತಂದು ಅಡುಗೆ ಮಾಡಲು ಆರಂಭಿಸಿದ್ದಳು. ಚಪಾತಿ ಹಿಟ್ಟು ಕಲಿಸಿ ಅದರ ಮೇಲೆ ದೇವರ ಗುಡಿಯಲ್ಲಿದ್ದ ಗಂಟೆ ತೆಗೆದು ಇಟ್ಟಳು. ಇದರಿಂದ ಸಿಡಿಮಿಡಿಗೊಂಡ ಅತ್ತೆ ಕೇಳಿದ್ರು... ಏನಮ್ಮ ದೇವರ ಪೂಜೆಗೆ ಬಾರಿಸೋ ಗಂಟೆ ತೆಗೆದು ಚಪಾತಿ ಹಿಟ್ಟಿನ ಮೇಲೇಕೆ ಇಟ್ಟೆ? ನಿನಗೆ ಒಂಚೂರು ಮಡಿ ಮೈಲಿಗೆ ಇಲ್ಲ ಎಂದಳು. ಸೊಸೆ ಅಷ್ಟೇ ನಯವಾಗಿ ಉತ್ತರ ಕೊಟ್ಟು 'ಪುಸ್ತಕದಲ್ಲಿ ಚಪಾತಿ ಹಿಟ್ಟು ಕಲಸಿ ಒಂದು ಗಂಟೆ ಇಡಿ ಅಂತ ಬರೆದಿದ್ದಾರೆ ಗೊತ್ತಾ' ಎಂದಳು.



ಕೆ. ಪದ್ಮಾವತಿ
9972294218

## ನಮ್ಮನ್ನಗಲಿದ ನಮ್ಮವರಿಗೆ-ಸಂಘದ ಶ್ರದ್ಧಾಂಜಲಿ

1. **ಕೆ.ವಿ. ರಾಮಚಂದ್ರ (80)** 5.7.2015 ಸಂಘದ ಸದಸ್ಯ ಎಂ.ಆರ್. ವಿಶ್ವೇಶ್ವರವರ ತಂದೆ.
2. **ಎಸ್. ಇಂದಿರಾ ಪ್ರಕಾಶ್ (64)** 19.8.15 ಸಂಘದ ಸದಸ್ಯ ಪ್ರಶಾಂತ್‌ರವರ ತಾಯಿ.
3. **ಸಾವಿತ್ರಮ್ಮ ನಾಗರಾಜ್ (60)** 19.8.15 ಸಂಘದ ಸದಸ್ಯ ಕೆ.ಸಿ. ನಟರಾಜ್‌ರವರ ಸೋದರಿ.
4. **ಪದ್ಮಾವತಮ್ಮ ವೆಂಕಟಗಿರಿ (82)** 5.10.15 ಸಂಘದ ಸದಸ್ಯ ಸುಂದರ್, ಪ್ರಕಾಶ್, ಜಯರಾಂರವರ ತಾಯಿ.
5. **ಶ್ರೀಮತಿ ಸುಂದರಮ್ಮ ಶಾಮಣ್ಣ (81)** 12.9.15 ಸಂಘದ ಸದಸ್ಯ ಡಾ. ಸ್ವಾಮಿನಾಥನ್ ಅವರ ಅತ್ತೆ.
6. **ಬಿನ್ನಮಂಗಲ ಚಂದ್ರಶೇಖರ್ (97)** 13.10.15, ಸಂಘದ ಸದಸ್ಯ ಲೀಲ ಗುಂಡಪ್ಪನವರ ತಂದೆ.

**ಸಂಘವು ಶ್ರದ್ಧಾಂಜಲಿ ಅರ್ಪಿಸುತ್ತದೆ.**



# ಅಡುಗೆ ಕಟ್ಟೆ

## ಕೊತ್ತಂಬರಿ ಸೊಪ್ಪಿನ ತೊಕ್ಕು

**ಬೇಕಾಗುವ ಪದಾರ್ಥಗಳು**

1. ಕೊತ್ತಂಬರಿ ಸೊಪ್ಪು 1 ದೊಡ್ಡ ಕಟ್ಟು
2. ಮೆಂತ್ಯ – ಸ್ವಲ್ಪ
3. ಹಿಂಗು – ಸ್ವಲ್ಪ
4. ಒಣಮೆಣಸಿನ ಕಾಯಿ ಬ್ಯಾಡಗಿ ಮತ್ತು ಗುಂಟೂರು
5. ಹುಣಸೇ ಹಣ್ಣು ರುಚಿಗೆ ತಕ್ಕಂತೆ
6. ಉಪ್ಪು ರುಚಿಗೆ ತಕ್ಕಂತೆ. ಸ್ವಲ್ಪ ಬೆಲ್ಲ.

**ಮಾಡುವ ವಿಧಾನ :** ಕೊತ್ತಂಬರಿ ಸೊಪ್ಪನ್ನು ಬಿಡಿಸಿ ನೀರಿನಲ್ಲಿ ಚೆನ್ನಾಗಿ ತೊಳೆದು ಬಸಿಯಲು ಬಿಡಿ, ನಂತರ ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ ಕಾಯಿಸಿದ ಮೇಲೆ, ಹಿಂಗು, ಮೆಂತ್ಯ, ಒಣ ಮೆಣಸಿನ ಕಾಯಿ ಹಾಕಿ ಹುರಿದುಕೊಳ್ಳಿ. ನಂತರ ಹುರಿದ ಪದಾರ್ಥಗಳನ್ನು ಮತ್ತು ಹುಣಸೇ ಹಣ್ಣು, ಉಪ್ಪು, ಬೆಲ್ಲ, ಕೊತ್ತಂಬರಿ ಸೊಪ್ಪು ಸ್ವಲ್ಪ ಅರಿಶಿನ ಮಿಕ್ಸಿಗೆ ಹಾಕಿ ಗಟ್ಟಿಯಾಗಿ ರುಬ್ಬಿಕೊಳ್ಳಿ.

**ವಿ.ಸೂ. ಯಾವ ಕಾರಣಕ್ಕೂ ನೀರನ್ನು ಬೆರಸಬಾರದು**

ರುಬ್ಬಿಕೊಂಡ ಪಚ್ಚಡಿ/ತೊಕ್ಕಿಗೆ ಒಗ್ಗರಣೆ ಹಾಕಿದ ಮೇಲೆ ಮತ್ತೆ ಸ್ವಲ್ಪ ಎಣ್ಣೆ ಹಾಕಿ ಚೆನ್ನಾಗಿ ಹುರಿದು ಮತ್ತೆ ಆರಿಸಿ ಬಾಟ್ಲಿಗೆ ಹಾಕಿ ಇಟ್ಟುಕೊಳ್ಳಿ. ದೋಸೆ, ಇಡ್ಲಿ, ಚಪಾತಿ ಜೊತೆ ತಿನ್ನುವುದಕ್ಕೆ ತುಂಬಾನೇ ಚೆನ್ನಾಗಿರುತ್ತೆ ಆರೋಗ್ಯಕ್ಕೂ ಒಳ್ಳೆಯದು.

## ಸೆವೆನ್ ಕಪ್ ಸ್ವೀಟ್ಸ್

**ಬೇಕಾಗುವ ಪದಾರ್ಥಗಳು :** ಕಡಲೇಹಿಟ್ಟು – 1 ಕಪ್ಪು, ಹಸಿತೆಂಗಿನ ತುರಿ – 1 ಕಪ್ಪು, ಸಕ್ಕರೆ – 3 ಕಪ್ಪು, ತುಪ್ಪ (ನಂದಿನಿ) 1– ಕಪ್ಪು, ಹಾಲು – 1 ಕಪ್ಪು, ಏಲಕ್ಕಿ ಪುಡಿ ವಾಸನೆಗೆ ತಕ್ಕಂತೆ

**ಮಾಡುವ ವಿಧಾನ :** ಮೊದಲಿಗೆ ಕಡಲೇಹಿಟ್ಟನ್ನು ತುಪ್ಪಹಾಕಿ ಸುವಾಸನೆ ಬರುವವರೆವಿಗೂ ಹುರಿದುಕೊಳ್ಳಬೇಕು. ನಂತರ ತಳ ದಪ್ಪಗಿರುವ ಪಾತ್ರೆಗೆ ಹಾಲು, ಸಕ್ಕರೆ, ಕೊಬ್ಬರಿ ಏಲಕ್ಕಿ ಪುಡಿ ಹಾಕಿ ಒಲೆ ಮೇಲೆ ಇಟ್ಟು ಕಾಯಿಸಿ, ಸಕ್ಕರೆ ಪೂರ್ಣ ಕರಗಿದ ಮೇಲೆ ಎಳೆ ಪಾಕ ಬರುತ್ತೆ, ಆಗ ಕಡಲೇಹಿಟ್ಟನ್ನು ಹಾಕಿ ಕದಡುತ್ತಲೇ ಇರಬೇಕು, ಕೈ ಬಿಡದೆ ಕದಡಿ, ಸ್ವಲ್ಪ ಗಟ್ಟಿಯಾದ ಮೇಲೆ ತುಪ್ಪವನ್ನು ಸ್ವಲ್ಪ ಸ್ವಲ್ಪವಾಗಿ ಹಾಕುತ್ತಲೇ ಚೆನ್ನಾಗಿ ಕಲಸಿ ಬೆರೆತು ಪಾತ್ರೆ ಬಿಡಲು ಶುರುವಾದಾಗ ತುಪ್ಪ ಸವರಿದ ತಟ್ಟೆಗೆ ಹಾಕಿ ಚೆನ್ನಾಗಿ ಹರಡಬೇಕು. ತಕ್ಷಣ ಚಾಕುವಿನಿಂದ ಬಿಲ್ಲೆಗಳಾಗಿ ಕತ್ತರಿಸಿ ಸ್ವಲ್ಪ ಆರಿದ ನಂತರ ಬಿಲ್ಲೆಗಳನ್ನು ಬಿಡಿಸಿ ಜೋಡಿಸಿ.

**ವಿ.ಸೂ. ಶುದ್ಧ ಹಸುವಿನ ತುಪ್ಪವನ್ನೇ ಉಪಯೋಗಿಸುವುದು.**



ಎಂ.ಎಸ್. ವಿಜಯಲಕ್ಷ್ಮಿ ಶ್ರೀಕಂಠಯ್ಯ

# ಪ್ರಶ್ನಾವಳಿ

**ಇವರು ಯಾರು ಬಲ್ಲೆ ಏನು?**
**ಇವರ ಹೆಸರು ಹೇಳಲೇನು?**

1. ನ್ಯಾಷನಲ್ ಕಾಲೇಜಿನ ಭೌತಶಾಸ್ತ್ರ ಪ್ರಾಧ್ಯಾಪಕ ಸ್ವಾತಂತ್ರ್ಯ ಯೋಧ, ಶಿಕ್ಷಣ ತಜ್ಞ ಮಾಜಿ ಉಪಕುಲಪತಿ, ಪದ್ಮಭೂಷಣ ಪ್ರಶಸ್ತಿ ಇವೆಲ್ಲಕ್ಕೂ ಸಾಮಾನ್ಯ ಅಂಶ ಈ ಸರಳತೆಯ ಸಾಕಾರಮೂರ್ತಿ.
2. ಭಾರತೀಯ ಕ್ರಿಕೆಟ್‌ನ ಇಬ್ಬರು 'ಲಿಟ್ಲ್‌ಮಾಸ್ಟರ್'ಗಳು ಭಾವ–ಮೈದುನರೂ ಆಗಿರುವ ಜೋಡಿಯಲ್ಲಿನ ಸ್ಕ್ವೇರ್‌ಕಟ್, ಸ್ಕ್ವೇರ್ ಡ್ರೈವ್ ಪ್ರವೀಣ.
3. ನಾಯಿಮರಿಗೆ ತಿಂಡಿಬೇಕೇ ಎಂದು ಕೇಳಿದ ಕವಿ ಬ್ರಹ್ಮನಿಗೆ ಹೇಳಿದ್ದು ಹೆಂಡ ಮುಟ್ಟಿದ ಕೈನ ಜೋಡಿಸ್ತೀನೀ ಅಂತ.
4. ಮಠಾಧಿಪತಿಯೊಬ್ಬರು ಸಂನ್ಯಾಸವನ್ನು ಬಿಟ್ಟು, ಮರಳಿ ಗೃಹಸ್ಥಾಶ್ರಮ ಸ್ವೀಕರಿಸಿದ ಅಪರೂಪದ ಉದಾಹರಣೆ. ಭಕ್ತಿಗೀತೆಗಳ ಗಾಯನದ ಸ್ವರ ಮಾಧುರ್ಯಕ್ಕೆ ಅಪಾರ ಜನಮನ್ನಣೆ.
5. ಕಂಪ್ಯೂಟರ್‌ಗಿಂತ ವೇಗವಾಗಿ ಲೆಕ್ಕಾಚಾರ ಮಾಡಬಲ್ಲ ಮಾನವ ಕಂಪ್ಯೂಟರ್.
6. ಟೈಮ್ಸ್ ಆಫ್ ಇಂಡಿಯಾದ ವ್ಯಂಗ್ಯಚಿತ್ರಗಳಲ್ಲಿ ಹರಕು ಪಂಚೆಯ ಶ್ರೀಸಾಮಾನ್ಯವನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವ ಕೈ ಚಳಕ.
7. ಬಾರಯ್ಯ ಬೆಳದಿಂಗಳೆ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ತಾಯಿ ದೇವಿಯನು ಕಾಣ ಹಂಬಲಿಸಿ... ಇತ್ಯಾದಿ ಹಾಡುಗಳ ಖ್ಯಾತಿಯ ಸುಗಮ ಸಂಗೀತ ಮತ್ತು ಚಲನಚಿತ್ರ ಗೀತೆಗಳನ್ನು ಹಾಡಿದ ಗಾಯಕ.
8. ಕನ್ನಡಂಬಾಡಿ ಕಟ್ಟೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಎಚ್.ಎ.ಎಲ್. ಸರ್ಕಾರಿ ಸಾಬೂನು ಕಾರ್ಖಾನೆ, ಮೈಸೂರು ಸ್ಯಾಂಡಲ್ ಸೋಪ್, ಸರಕಾರಿ ಸಾಬೂನು ಕಾರ್ಖಾನೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಕ್ಕರೆ ಕಾರ್ಖಾನೆ ಇತ್ಯಾದಿ. ಅನೇಕ ಈ ಮಹಾನ್ ವ್ಯಕ್ತಿಯಿಂದ ದೇಶಕ್ಕೆ ಇಷ್ಟೆಲ್ಲಾ ಲಾಭವಾಗಿದೆ. ಭಾರತಮಾತೆಯ ಹೆಮ್ಮೆಯ ಪುತ್ರ.

■ ಗಾಯತ್ರಿ ಶೇಷಾಚಲ
25630483



**ಉತ್ತರಗಳು**

1. ಎಚ್. ನರಸಿಂಹಯ್ಯ, 2. ಜಿ.ಆರ್. ವಿಶ್ವನಾಥ್ (ಭಾವ–ಸುನಿಲ್ ಗವಾಸ್ಕರ್), 3. ಜಿ.ಪಿ. ರಾಜರತ್ನಂ, 4. ವಿದ್ಯಾಭೂಷಣರು, 5. ಡಾ. ಶಕುಂತಲಾದೇವಿ, 6. ಆರ್.ಕೆ. ಲಕ್ಷ್ಮಣ್, 7. ಪಿ. ಕಾಳಿಂಗ ರಾವ್, 8. ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ

## ಎಲ್ಲವೂ ಮುಂದೆ ಮುಂದೆ

ನಿಮಿಷಗಳು ಉರುಳುತ್ತಿವೆ ಘಂಟೆಗಳಾಗಿ
ಘಂಟೆಗಳು ವೇಗದಿಂದಲಿ ದಿನಗಳಾಗುತ್ತಿವೆ
ದಿನಗಳೋ ಅತಿ ಜಾಗ್ರತೆ ಸಂವತ್ಸರಗಳಾಗುತ್ತಿವೆ.
ಸಂವತ್ಸರಗಳೋ ಬೇಡವೆಂದರೂ ಯುಗಗಳಾಗುತ್ತಿವೆ.

ಚಂದ್ರಗ್ರಹವೂ ಭೂಮಿಯ ಸುತ್ತಾ ತಿರುಗುತ್ತಿದೆ.
ಭೂಮಂಡಲವು ಸೂರ್ಯನ ಸುತ್ತಾ ಯಾಂತ್ರಿಕವಾಗಿ ಚಲಿಸುತ್ತಿದೆ
ಇತರ ಗ್ರಹಗಳೂ ಇದೇ ರೀತಿ ಸೂರ್ಯದೇವನ ಅಡಿಯಾಳುಗಳು
ಎಲ್ಲಾ ಗ್ರಹಗಳಿಗೂ ಒಂದೇ ಗುರಿ ಮುಂದೆ ಮುಂದೆ ಹೋಗಲು

ಎಲ್ಲವೂ ಚಲಿಸುವ ಪಾಠ ಕಲಿತಿವೆ
ಮುಂದೆ ಮುಂದಕೆ ಹೋಗುವ ಅಭ್ಯಾಸ
ಎಲ್ಲದಕ್ಕೂ ಭೂತಕಾಲ ಮರೆಯುವ ಕಾತುರ
ಇದೊಂದು ಪವಾಡ, ದೇವರ ದೃಷ್ಟಿಯಲಿ

ಕಳೆದ ಸಮಯ ಬರುವಂತಿಲ್ಲ; ಯಾರಿಗೂ ಬೇಕಿಲ್ಲ
ಮುಂದೆ ಏನಾಗುವುದು ಎಂದು ತಿಳಿಯದ ನಮ್ಮ ಪಯಣ
ಪ್ರತಿಯೊಬ್ಬನೂ ಅತಿ ವೇಗದಿ ಮುಂದುವರಿಯುತ್ತಾನೆ
ಗುರಿ ಏನೆಂದು ತಿಳಿಯದು; ತಿಳಿಯಲು ಆಸೆ ಇಲ್ಲ

ಇಂದಿನ ಶಿಶುವು ಕ್ರಮೇಣ ಬೆಳೆದು ವಯಸ್ಸಾಗಿ ಅಸು ನೀಗುತ್ತದೆ
ಸಸಿಯಾಗಿ ಬಿತ್ತಿದರೆ ಮರವಾಗಿ ಕೊನೆಗೆ ನಶಿಸುವುದು
ಜಲಪ್ರಾಣಿಗಳು ಹೀಗೆಯೇ ಬೆಳೆದು ಜನರ ಆಹಾರವಾಗುವುದು
ಯಾರು ಇದಕ್ಕೆಲ್ಲ ಕಾರಣ ಎಂದು ಯಾರಿಗೂ ತಿಳಿಯದು।

ಯೋಚಿಸಲು ಕೂತರೆ, ಹೊಟ್ಟೆಯ ಪಾಡು ಕಾಡುತ್ತದೆ
ಅದಾದನಂತರ ನಿದ್ದೆಯ ಸರದಿ, ಕಾಲವು ಮಿಂಚಿ ಪ್ರಾಣ ಭಯ
ಹೀಗೆಯೇ ಉರುಳುತ್ತಿವೆ. ನಮ್ಮ ಜೀವನ ದಿನಗಳು
ಚಿಂತನೆಗೆ ಸಮಯ ಸಾಲದು ಯಾರು ಸೃಷ್ಟಿಕರ್ತನೆಂದು ತಿಳಿಯಲು



■ ಎಂ.ಪಿ. ರಂಗನಾಥನ್
94808 61849

## ಭೀಮರಥ ಶಾಂತಿ



ಸಂಘದ ಹಿರಿಯ ಗೌರವಾನ್ವಿತ ಪೋಷಕರು ಹಾಗೂ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಎಸ್. ಶ್ರೀನಿವಾಸಯ್ಯನವರಿಗೆ ದಿ.26.8.2015ರ ಶುಭದಿನದಂದು 'ಭೀಮರಥ' ಶಾಂತಿ ಗುರು ಹಿರಿಯರ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿತು. ಸಂಘದ ಅಧ್ಯಕ್ಷ ಶ್ರೀ ಸೋಮಸುಂದರ, ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ ಸಮಾರಂಭದಲ್ಲಿ ಭಾಗವಹಿಸಿ, ಸದಸ್ಯರೆಲ್ಲರ ಪರವಾಗಿ ಅಭಿನಂದಿಸಿದರು. ಶ್ರೀನಿವಾಸಯ್ಯ ಹಾಗೂ ಶ್ರೀಮತಿ ನಿರ್ಮಲಾ ಶ್ರೀನಿವಾಸಯ್ಯರವರಿಗೆ ಸಂಘದ ಸದಸ್ಯರು ಶುಭ ಹಾರೈಸಿದ್ದಾರೆ.

## ರಂಗ ಪ್ರವೇಶ
### ಕುಮಾರಿ ಸಾಯಿ ಸಿಂಧೂರ



*ನೃತ್ಯವೋ ಬ್ರಹ್ಮನಟರಾಜನದು ಜಗವೆಲ್ಲ।*
*ಪ್ರತ್ಯೇಕ ಜೀವದಶೆಯವನಂಗಭಂಗಿ॥*
*ಸತ್ಯ ಸತ್ತ್ವ ಜ್ವಾಲೆ ವಿಶ್ವಮಾಯಾಲೀಲೆ।*
*ಪ್ರತ್ಯಗಾತ್ಮನು ನೀನು – ಮಂಕುತಿಮ್ಮ॥*

ನಮ್ಮ ಸಂಘದ ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಕುಮಾರ್ ಮತ್ತು ಶ್ರೀಮತಿ ಕಾವೇರಿಯವರ ಪುತ್ರಿ ಹಾಗೂ **ಶ್ರೀಮತಿ ಯಾಮಿನಿ ಮುತ್ತಣ್ಣನವರ ಶಿಷ್ಯೆ ಚಿ. ಸಾಯಿಸಿಂಧೂ** ಅವರ ನೃತ್ಯ ರಂಗಪ್ರವೇಶ ಕಾರ್ಯಕ್ರಮವು ದಿ. 26.9.2015ರಂದು ಇಂದಿರಾನಗರದ ಪುರಂದರ ಭವನ ಸಭಾಂಗಣದಲ್ಲಿ ಡಾ. ವಸುಂಧರಾ ದೊರೆಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಪೊಲೀಸ ಮಹಾನಿರ್ದೇಶಕ ಶ್ರೀ ಎಸ್.ಎನ್.ಎಸ್. ಮೂರ್ತಿಯವರು ಆಗಮಿಸಿದ್ದರು. ಕುಮಾರಿ ಸಾಯಿಸಿಂಧೂರ ತಮ್ಮ ನೃತ್ಯದಲ್ಲಿ ಪುಷ್ಪಾಂಜಲಿ, ಚೂರ್ಣಿಕೆ, ಅಲರಿಪು, ಜತಿಸ್ವರಂ, ಬ್ರೋಚೆವಾರೆವರುರಾ, ವರ್ಣಂ ಚಂದ್ರಚೂಡ, ಕೃಷ್ಣಾ ನೀ ಬೇಗನೆ ಬಾರೋ ಮತ್ತು ತಿಲ್ಲಾನ ಇವುಗಳನ್ನು ಅಭಿನಯಿಸಿದರು. ಸಂಘದ ಅಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿಯ ಪರವಾಗಿ ಸಂಘದ ಸಹಕಾರ್ಯದರ್ಶಿ ಶ್ರೀ ಎಸ್. ಅರುಣ್ ರವರು **ಸಾಯಿ ಸಿಂಧೂರ**ಗೆ ಹೂಗುಚ್ಛ ನೀಡಿ ಅಭಿನಂದಿಸಿದರು.



# ಶ್ರೀಮದ್ ಭಾಗವತ ಮಹಾಪುರಾಣ
# ದಶಮ ಸ್ಕಂದಃ

ಶ್ರೀಮದ್ ಭಾಗವತ ಮಹಾಪುರಾಣ
ದಶಮ ಸ್ಕಂದಃ – ನವಮೋಧ್ಯಾಯಃ
ಯಶೋದೆಯ ಮೇಲೆ ಕೃಪೆ [ಹರಿಸಿದ್ದು]

ಭಗವಾನ್ ಶ್ರೀ ಶುಕ ಮುನಿಗಳು ಪರೀಕ್ಷಿತನಿಗೆ ಕೇವಲ ಏಳೇ ಏಳು ದಿನಗಳಲ್ಲಿ ಭಾಗವತ ಮಹಾಪುರಾಣವನ್ನು ಉಪದೇಶ ಮಾಡಿ, ಅವನಿಗೆ ಮೋಕ್ಷಕ್ಕೆ ಅನಾಯಾಸವಾದ ಮಾರ್ಗವನ್ನು ತಿಳಿಸಿದರು.

ಪ್ರಸ್ತುತ ಈ ಅಧ್ಯಾಯವು, ದಾಮೋದರ ಲೀಲೆ ಎಂದು ಸುಪ್ರಸಿದ್ಧವಾಗಿದೆ.

ದಾಮ ಎಂದರೆ ಹಗ್ಗ; ಉದರ, ಎಲ್ಲರಿಗೂ ತಿಳಿದಿರುವಂತೆ ಹೊಟ್ಟೆ, ಎಂದು.

ಭಗವಾನ್ ಶ್ರೀ ಶುಕರು ಹೇಳಿದ್ದು:–

ಒಂದು ದಿನ, ಎಲ್ಲಾ ಗೃಹದಾಸಿಯರೂ ಬೇರೆ ಬೇರೆ ಕಾರ್ಯಗಳಲ್ಲಿ ನಿರತರಾದ್ದರಿಂದ, ನಂದನ ಪತ್ನಿಯಾದ ಯಶೋದೆಯು ಸ್ವತಃ ಮೊಸರನ್ನು ಕಡೆಯಲು ಹಚ್ಚಿಕೊಂಡಳು. ಕಡೆಯುವಾಗ, ತನ್ನ ಮಗನ ಬಾಲ ಲೀಲೆಗಳನ್ನು ನೆನಪಿಸಿಕೊಂಡು ಅವನ್ನೆಲ್ಲ ಗೀತರೂಪದಲ್ಲಿ ಹಾಡಿಕೊಳ್ಳುತ್ತಿದ್ದಳು.

ಅವಳು ಉಟ್ಟಿದ್ದುದು ರೇಷ್ಮೆಯ ವಸ್ತ್ರ. ಶ್ರಮದಿಂದ ಹಗ್ಗವನ್ನು ಎಳೆಯುತ್ತಿದ್ದುದರಿಂದ ಯಶೋದೆಯ ಕರ್ಣ ಕುಂಡಲಗಳು, ಬಳೆಗಳು, ಅವಳ ಗಾಯನಕ್ಕೆ ತಕ್ಕ ತಾಳ ಹಾಕುತ್ತಾ, ಜೋಕಾಲಿಯಂತೆ ತೂಗುತ್ತಿದ್ದವು. ಅವಳು ಮುಡಿದ ಮಾಲತಿ (ಜಾಜಿ) ಹೂಗಳು ಅವಳ ಜಡೆಯಿಂದ ಜಾರುತ್ತಿತ್ತು. ಆಗ, ಶ್ರೀಕೃಷ್ಣನು ಅಲ್ಲಿಗೆ ಬಂದು, ತಾಯಿಯ ತೊಡೆಯ ಮೇಲೆ ಕುಳಿತನು. ಅವನಿಗೆ ವಾತ್ಸಲ್ಯದಿಂದ ಯಶೋದೆಯು ಹಾಲು ಕುಡಿಸುತ್ತಿರಲು, ತತ್‌ಕ್ಷಣ ಅವಳಿಗೆ ಒಲೆಯ ಮೇಲೆ ಕಾಯುತ್ತಿದ್ದ ಹಾಲು, ಉಕ್ಕುತ್ತಿರುವುದು ಕಾಣಿಸಿತು. ಮಗನನ್ನು ಕೆಳಗಿಳಿಸಿ, ತ್ವರೆಯಿಂದ ಹಾಲನ್ನು ಒಲೆಯಿಂದ ಕೆಳಗಿಳಿಸಲು ಓಡಿದಳು.

ಶ್ರೀ ಕೃಷ್ಣನಿಗೆ ತನಗಿಂತ ಹಾಲು ಹೆಚ್ಚಾಯಿತೆಂದು ಕೋಪ ಬಂದು, ತುಟಿಗಳು ಅರುಣ ಬಣ್ಣಕ್ಕೆ ತಿರುಗಿ, ಅಲ್ಲಿಯೇ ಅರೆಯಲು ಇಟ್ಟಿದ್ದ ಚಪ್ಪಟೆಯಾದ ಕಲ್ಲಿನಿಂದ ಮೊಸರಿನ ಗಡಿಗೆಯನ್ನು ಒಡೆದನು. ಆ ಹುಸಿಕೋಪವು, ಈಗ ಕಣ್ಣೀರಾಗಿ ಇಳಿಯಿತು. ಮನೆಯ ಒಳಭಾಗದಲ್ಲಿದ್ದ ತಾಜಾ ಬೆಣ್ಣೆಯನ್ನು ರಹಸ್ಯವಾಗಿ ತಿನ್ನಲು ಹೊರಟನು. ಯಶೋದೆಯು ಹಾಲಿನ ಪಾತ್ರೆಯನ್ನು ಕೆಳಗಿಳಿಸಿ, ಪುನಃ ಆಚೆಗೆ ಬಂದಾಗ ಒಡೆದ ಮೊಸರಿನ ಗಡಿಗೆಯನ್ನು ಕಂಡಳು. ಅದು, ತನ್ನ ಪುತ್ರನ ಕಾರ್ಯವೆಂದು ತಿಳಿದು, ಅವನು ಅಲ್ಲೆಲ್ಲೂ ಇಲ್ಲದ್ದನ್ನು ನೋಡಿ, ಹೃತ್ಪೂರ್ವಕವಾಗಿ ನಕ್ಕಳು! ನಂತರ, ಅವಳ ಮಗನು, ವರಳುಕಲ್ಲಿನ (mortar-pestle) ಮೇಲೆ ನಿಂತು, ಅಲ್ಲೇ ಉಯ್ಯಾಲೆಯ ಮೇಲಿಟ್ಟಿದ್ದ ತಾಜಾ ಬೆಣ್ಣೆಯನ್ನು ಒಂದು ಕೋತಿಗೆ ಧಾರಾಳವಾಗಿ ತಿನ್ನಿಸುತ್ತಿದ್ದುದನ್ನು ಕಂಡಳು. ಅವನ ಕಣ್ಣುಗಳಲ್ಲಿ ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡವನಂತೆ ಭಯವಿತ್ತು. ಅವಳು ಮೆಲ್ಲನೆ ಹಿಂದಿನಿಂದ ಅವನ ಬಳಿ ಬಂದಳು. ಶ್ರೀಕೃಷ್ಣನಿಗೆ ಅವಳ ಕೈಯ್ಯಲ್ಲಿದ್ದ ಕೋಲು ಸ್ಪಷ್ಟವಾಗಿ ಗೊತ್ತಾಗಿ, ಬೇಗನೆ ಕಲ್ಲಿನಿಂದ ಇಳಿದು, ಭಯವೇನೋ ಎಂಬಂತೆ ಓಡಿದನು. ಯಶೋದೆಯೂ ಸಹ ಆ ಪರಮಪುರುಷನ ಹಿಂದೆ ಓಡಿದಳು. (ಯಾರನ್ನು, ಯೋಗಿಗಳ ಮನಸ್ಸು ಏಕಾಗ್ರಚಿತ್ತದಿಂದ ಸಹ, ಅವನ ತತ್ತ್ವವನ್ನು ತಿಳಿಯಲು ಕಷ್ಟಸಾಧ್ಯವೋ, ಅಂತಹವನನ್ನು.) ಮಗನ ಹಿಂದೆ ಓಡುವ ತಾಯಿಯು ಸ್ಥೂಲವಾದ್ದರಿಂದ ಅವಳು ಓಡುವ ಗತಿಯು ಕೊಂಚ ನಿಧಾನವಾಯಿತು. ಅವಳ ಜಡೆಯು ಸಡಿಲಿಸಿ ಮುಡಿದ ಮಾಲತಿ ಹೂಗಳು ಜಾರುತ್ತಿದ್ದವು. ಅಂತೂ, ಮಗನನ್ನು ಎಡಗೈಯಿಂದ ಹಿಡಿದು, ಬಲಗೈಲಿದ್ದ ಕೋಲಿನಿಂದ ಹೊಡಿಯುವಂತೆ ಹೆದರಿಸಿದಳು. ಮಗನು ಜೋರಾಗಿ ಅತ್ತು, ಭಯವೋ ಎಂಬಂತೆ ನೋಡಿದನು. ಅವನ ಕಣ್ಣುಗಳಿಗೆ ಯಶೋದೆ ಹಚ್ಚಿದ್ದ ಕಾಡಿಗೆಯು, ಮುಖದ ಮೇಲೆಲ್ಲಾ ಹರಡಿತು. ಮಗನಿಗೆ ಭಯವಾಯಿತೆಂದು



ಯಶೋದೆಯು ಕೋಲನ್ನು ಎಸೆದಳು. ಅವಳಿಗೆ ಮಗನ ಮೇಲೆ ಬಹಳ ಪ್ರೀತಿ ಇತ್ತು. ಆದರೆ, ಅವನ ಮಹಾತ್ಮೆಯು ತಿಳಿದಿರಲಿಲ್ಲವಾದ್ದರಿಂದ, ಅವನನ್ನು ಹಗ್ಗದಲ್ಲಿ ಕಟ್ಟಲು ಹೊರಟಳು.

ಯಾರಿಗೆ "ಹೊರಗೆ–ಒಳಗೆ" ಎಂಬುದೇ ಇಲ್ಲವೋ, ಅವನನ್ನು ಕಟ್ಟಲು ಸಾಧ್ಯವೇ? ಅವನು ಒಳಗೂ, ಹೊರಗೂ, ಅಥವಾ ಅವನೇ ಜಗತ್ತಾಗಿರಲು ಕಟ್ಟಿಹಾಕಲು ಹೇಗೆ ಸಾಧ್ಯ? ಯಾರಿಗೆ ಪೂರ್ವ ಮತ್ತು ಅಪರಗಳು ಇಲ್ಲವೋ, ಆದಿ ಮತ್ತು ಅಂತ್ಯ ಇಲ್ಲವೋ, ಯಾರು ಸೃಷ್ಟಿಯ ಮುನ್ನವೂ ಇರುವವನೋ ಮತ್ತು ಪ್ರಳಯದ ನಂತರವೂ ಅವ್ಯಕ್ತವಾಗಿ ಇರುವವನೋ ಆ ಸಚ್ಚಿದಾನಂದನನ್ನು ಕಟ್ಟಲು ಹೇಗೆ ತಾನೆ ಸಾಧ್ಯ? ಆದರೆ, ಅವನನ್ನು ಯಶೋದೆಯು ತನ್ನ ಮಗನೆಂದು ತಿಳಿದು, ಅವನನ್ನು ಹಗ್ಗದಿಂದ ವರಳುಕಲ್ಲಿಗೆ ಕಟ್ಟಲು ತೊಡಗಿದಳು. ಕಟ್ಟಲು ನೋಡಿದಾಗ, ಹಗ್ಗವು ಎರಡು ಅಂಗುಲಗಳಷ್ಟು ಕಡಿಮೆ ಇತ್ತು. ಇನ್ನೊಂದು ಹಗ್ಗವನ್ನು ತಂದು ಎರಡನ್ನೂ ಸೇರಿಸಿದಳು. ಆದರೆ, ಅಲ್ಲಿಗೂ ಕಡಿಮೆ ಬಿತ್ತು. ಮತ್ತೊಂದು ಹಗ್ಗವನ್ನು ತಂದು ಸೇರಿಸಿದಳು. ಆದರೂ ಕಟ್ಟಲು ಆಗಲಿಲ್ಲ. ಹೀಗೆ, ಮನೆಯಲ್ಲಿರುವ ಎಲ್ಲಾ ಹಗ್ಗಗಳನ್ನು ಸೇರಿಸಿ ಕಟ್ಟಿದರೂ ಸಹ, ಶ್ರೀಕೃಷ್ಣನನ್ನು ಕಟ್ಟಿಹಾಕಲು ಎರಡು ಅಂಗುಲಗಳಷ್ಟು ಕಡಿಮೆ ಬರುತಿತ್ತು. ಯಶೋದೆಯ ಈ ಕಟ್ಟುವಿಕೆಯನ್ನು ಮತ್ತು ಶ್ರೀಕೃಷ್ಣನನ್ನು ನೋಡಲು ಗೋಪಿಕೆಯರೆಲ್ಲಾ ಅಲ್ಲಿ ಸೇರಿದ್ದರು. ಎಲ್ಲರೂ, ಮುಸಿ ಮುಸಿ ನಗುತ್ತಿದ್ದರು. ಯಶೋದೆಯ ಪರಿಶ್ರಮವನ್ನು ನೋಡಿ ಶ್ರೀಕೃಷ್ಣನು ಅವಳ ಮೇಲಿನ ಅನುಕಂಪದಿಂದ ತನ್ನನ್ನು ತಾನೇ ಕಟ್ಟಿಸಿ ಕೊಂಡನು. ಈ ರೀತಿಯಲ್ಲಿ ಶ್ರೀಕೃಷ್ಣನು ತಾನು ಸರ್ವತಂತ್ರ ಸ್ವತಂತ್ರನಾದರೂ, ಭಕ್ತರ ವಶದಲ್ಲಿದ್ದೇನೆ ಎಂದು ನಿರೂಪಿಸಿದನು. ಇಂತಹ ಕೃಪೆಯನ್ನು ಭಗವಾನ್ ಶ್ರೀಕೃಷ್ಣನು ಯಶೋದೆಯ ಮೇಲೆ ಹರಿಸಿದನು. ಭಗವಂತನು ಭಕ್ತರಿಗೆ ಎಷ್ಟು ಸುಲಭವಾಗುವನೋ, ಉಳಿದವರಿಗೆ ಅಷ್ಟೇ ದುರ್ಲಭ.

ಇಲ್ಲಿ, ಸಂತರು ನೀಡುವ ವ್ಯಾಖ್ಯಾನವೇನೆಂದರೆ–ಎರಡು ಅಂಗುಲ ವೆಂದರೆ, ಜ್ಞಾನ ಮತ್ತು ವೈರಾಗ್ಯ. ಪರಮಾತ್ಮನನ್ನು ಅರಿಯಲು, ಒಂದು ಜೀವಿಗೆ ಬೇಕಾದುದು ಭಕ್ತಿ, ವೈರಾಗ್ಯ ಹಾಗೂ ಜ್ಞಾನ. ಯಶೋದೆಗೆ ಶ್ರೀಕೃಷ್ಣನ ಮೇಲೆ ವಾತ್ಸಲ್ಯ ಭಾವನೆ ಇದ್ದುದರಿಂದ, ಭಕ್ತಿಗೆ ಕಡಿಮೆ ಏನೋ ಇರಲಿಲ್ಲ. ಆದರೆ, ಇದು 'ನನ್ನ ಮಗ' ಎಂದು ತಿಳಿದುದರಿಂದ, ವೈರಾಗ್ಯ ಮತ್ತು ಇವನು ಪರಮಪುರುಷನೆಂಬ ಜ್ಞಾನ, ಇವೆರಡರ ಅಭಾವ. ಆದ್ದರಿಂದ, ವೈರಾಗ್ಯ ಮತ್ತು ಜ್ಞಾನ – ಹಗ್ಗದ ಎರಡು ಅಂಗುಲಗಳು ಕಡಿಮೆ ಬರುತ್ತಿತ್ತು.

ನಂತರ ಯಶೋದೆಯು ಗೃಹಕೃತ್ಯಗಳಲ್ಲಿ ಮತ್ತೆ ತೊಡಗಲು, ಶ್ರೀ ಕೃಷ್ಣನು ಎರಡು ಅರ್ಜುನ ಮರಗಳನ್ನು ವೀಕ್ಷಿಸಿದನು. ಅವೆರಡು ಮರಗಳು, ಮುಂಚೆ, ಯಕ್ಷರಾಗಿದ್ದರು. ಅವರು ಕುಬೇರನ ಮಕ್ಕಳಾದ ನಲಕೂಬರ ಮತ್ತು ಮಣಿಗ್ರೀವ ಎಂಬ ಹೆಸರಿನಿಂದ ಖ್ಯಾತರಾಗಿದ್ದರು. ಹಣದಿಂದ ಉಂಟಾಗುವ ಮದದಿಂದ ಕೂಡಿದ್ದರು. ಅವರ ಮದವು, ವನಕ್ಕೆ ಮತ್ತು ವನ್ಯಜೀವಿಗಳಿಗೆ ಹಾನಿ ಉಂಟುಮಾಡುವುದು ಎಂದು, ದೂರದೃಷ್ಟಿ ಉಳ್ಳ ನಾರದ ಮುನಿಗಳು ಕಂಡು, ಅವರಿಗೆ ಶಾಪವನ್ನು ಕೊಟ್ಟು ಅವರಿಬ್ಬರನ್ನೂ ಮರಗಳನ್ನಾಗಿ ಪರಿವರ್ತಿಸಿದ್ದರು. ಈ ದಾಮೋರದ ಲೀಲೆಯು ನಲಕೂಬರ ಮತ್ತು ಮಣಿಗ್ರೀವರ ಉದ್ಧಾರಕ್ಕಾಗಿ ಎಂದು ಶುಕಮುನಿಗಳು ಮುಂದಿನ ಅಧ್ಯಾಯದಲ್ಲಿ ವಿವರಿಸಲಿದ್ದಾರೆ.



– ಮೀರಾ ಕೃಷ್ಣಮೂರ್ತಿ
97402 93012

# ಸುದ್ದಿ ಮನೆ

**ಬೃಹಚ್ಚರಣ ಪತ್ರಿಕೆಗೆ ಪ್ರಾಯೋಜಕರು**

1. ಗಣೇಶ್ ಶ್ರೀಧರ್, ರೂ. 500/–
2. ಗುರುಮೂರ್ತಿ, ಇಳಾ ಮುದ್ರಣ ರೂ. 1000/–
3. ಶಂಕರ್ ಪ್ರಸಾದ್, ರೂ. 500/–
4. ಎಸ್. ರವಿಕುಮಾರ್, ರೂ. 2000/–
5. ಶಿವಕುಮಾರ್ – ಮಮತಾ, ರೂ. 500/–
   (ತಾತ–ಅಜ್ಜಿ, ಛಾಯಾಪತಿ–ವರಲಕ್ಷ್ಮಿ ಹೆಸರಿನಲ್ಲಿ)

**ಸದಸ್ಯರಿಂದ ಪೋಷಕರಾದವರು**

1. ಆರ್.ಎಸ್. ರಾಜಗೋಪಾಲ್, ರೂ. 4000/–

**ವಿದ್ಯಾನಿಧಿಗೆ ದಾನಿಗಳು**

1. ಬಿ.ಎಸ್. ಸೂರ್ಯನಾರಾಯಣರಾವ್, ರೂ. 2,500/–
2. ಟಿ.ಎಲ್. ರಾಮಚಂದ್ರನ್, ರೂ. 750/–
3. ಶಾರ್ವರಿ, ರೂ. 500/–
4. ಎನ್.ವಿ. ರಮೇಶ್, ರೂ. 500/–
5. ಆರ್.ಎಸ್. ಪ್ರಶಾಂತ್, ರೂ. 2000/–**(ತಾಯಿ ಇಂದಿರಾಪ್ರಕಾಶ್ ಹೆಸರಿನಲ್ಲಿ)**
6. ಕೆ.ಬಿ. ದಾಸ್, ರೂ. 1000/–

**ಅನ್ನಸಂತರ್ಪಣಾನಿಧಿ**

1. ಆರ್.ಕೆ. ಶಿವಪ್ರಸಾದ್, ರೂ. 4,000/–
2. ಜೆ.ಎನ್. ಶೀಲಾ, ರೂ. 2,000/–
3. ಸುರೇಶ್, ರೂ. 5000/–
4. ಆರ್.ಎಸ್. ದಾನಿ, 1500/–
5. ರತ್ನ ಬಾಲಕೃಷ್ಣ, 2000/–
6. ಆರ್.ಎಸ್. ಪ್ರಶಾಂತ್, ರೂ. 2000/– **(ತಂದೆ ದಿ. ಸೂರ್ಯಪ್ರಕಾಶ್ ಹೆಸರಿನಲ್ಲಿ)**
7. ಗುಂಜೂರು ಜಾನಕಮ್ಮ ಶ್ರೀನಿವಾಸಮೂರ್ತಿ ಮತ್ತು ಮಕ್ಕಳು, ರೂ.5005/–

**ಸಂಘಕ್ಕೆ ಹೊಸ ಸದಸ್ಯರು**

1. ಕರ್ಪಗಂ, ರೂ. 1,000/–
2. ಪಿ. ಶ್ರೀನಿವಾಸ್, ರೂ. 1,000/–
3. ಅನಂತ ಪದ್ಮನಾಭ, ರೂ. 1,000/–
4. ಎ.ಆರ್. ಕೃಷ್ಣ, ರೂ. 1,000/–
5. ಜಿ.ಎಸ್. ಜಾನಕಿರಾಮ್, ರೂ. 1000/–

## ನೂತನ ಗೃಹಪ್ರವೇಶ

ಸಂಘದ ಸದಸ್ಯ ಸರ್ಜಾಪುರದ ಶ್ರೀ ವಿಜಯದೇವ್ ಹಾಗೂ ಶ್ರೀಮತಿ ಸರಸ್ವತಮ್ಮ ತಮ್ಮ ನೂತನ ಗೃಹಪ್ರವೇಶವನ್ನು ದಿ.18.8.2015 ರಂದು ನೆರವೇರಿಸಿದರು. (ಬಿ.ಟಿ.ಎಂ.ಲೇಔಟ್) **ಸಂಘ ಶುಭ ಹಾರೈಸುತ್ತದೆ.**

## ಕುಟುಂಬಕ್ಕೆ ಹೊಸ ಸೇರ್ಪಡೆ

1. ಸದಸ್ಯ ಶ್ರೀ ಅನಂತ ಶ್ರೀಮತಿ ರಶ್ಮಿಯವರಿಗೆ ದಿನಾಂಕ: 2.6.2015ರಂದು ಸುಪುತ್ರಿ ಜನಿಸಿರುತ್ತಾಳೆ.

2. ಸಂಘದ ಸದಸ್ಯ ಎನ್. ಶಿವಕುಮಾರ್ ಮತ್ತು ಶ್ರೀಮತಿ ಮಮತಾರವರಿಗೆ ದಿನಾಂಕ: 23.8.2015ರಂದು ಸುಪುತ್ರ ಜನಿಸಿರುತ್ತಾನೆ. (ಶ್ರೀ ಕೆ.ಸಿ. ನಟರಾಜ್ ಹಾಗೂ ಶ್ರೀಮತಿ ಸರಸ್ವತಿ ಅವರ ಮೊಮ್ಮಗ)

3. ಸಂಘದ ಸದಸ್ಯ ಭರತ್ ಶರ್ಮ ಮತ್ತು ಶ್ರೀಮತಿ ಸುಹಾಸಿನಿ ದಂಪತಿಗಳಿಗೆ ದಿನಾಂಕ: 16.09.2015ರಂದು ಮಗಳು ಜನಿಸಿರುತ್ತಾಳೆ. (ಶ್ರೀ ಕೆ.ಬಿ.ಎಸ್. ಶರ್ಮ ದಂಪತಿಗಳವರ ಮೊಮ್ಮಗಳು)

**ಸಂಘವು ನವಜಾತ ಶಿಶುಗಳಿಗೆ ಶುಭ ಹಾರೈಸುತ್ತದೆ**

# ವಾರ್ತಾ ಚಿತ್ರಗಳು



*ಸಂಘದ ಸದಸ್ಯೆ ಶ್ರೀಮತಿ ಶ್ರೀದೇವಿ ಬಾಲಸುಬ್ರಹ್ಮಣ್ಯಂ ರವರು ಈ ಬಾರಿಯ ಶ್ರೇಷ್ಠ ಶಿಕ್ಷಕಿ ಎಂದು ರಾಷ್ಟ್ರಪ್ರಶಸ್ತಿ ಪಡೆದಿರುತ್ತಾರೆ. ಕೇಂದ್ರ ಸರ್ಕಾರದ ಸಚಿವೆ ಶ್ರೀಮತಿ ಸ್ಮೃತಿ ಇರಾನಿಯವರು ದೆಹಲಿಯಲ್ಲಿ ಪ್ರಶಸ್ತಿ ನೀಡಿ ಗೌರವಿಸಿದರು.*



*ಸಂಘದ ಸದಸ್ಯ ಗುಮ್ಮಳಾಪುರದ ಪ್ರೊ. ಕೆ.ಎಸ್. ಮಧುಸೂದನ್‌ರವರ 'ಗುಮ್ಮಳಾಪುರಾಣೇವು ಪರಸಂಗಗಳು' ಪುಸ್ತಕವು ದಿ. 11.7.2015ರಂದು ಬಿಡುಗಡೆಗೊಂಡಿತು.*



*ಸಂಘದ ಹಿರಿಯ ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿಯವರ 'ಹೆಮ್ಮರ ಡಿ.ವಿ.ಜಿ' ಪುಸ್ತಕ ಬಿಡುಗಡೆ ಸಮಾರಂಭ.*

## ಅಭಿನಂದನೆ



ಸಂಘದ ಸದಸ್ಯ ಶ್ರೀ ಟಿ.ಪಿ. ಜಗನ್ನಾಥ್ ಮತ್ತು ಶ್ರೀಮತಿ ಪದ್ಮರವರ ಸೊಸೆ **ಶ್ರೀಮತಿ ಸಮನ್ವಿತಾ ರಘುರಾಂ** ರವರು ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಎಂ.ಟೆಕ್ (ಹೈಡ್ರಾಲಿಕಿಸ್) ಪದವಿಯಲ್ಲಿ ಮೊದಲನೇ ರ್‍ಯಾಂಕ್ ಪಡೆದು ಬಂಗಾರದ ಪದಕವನ್ನು ಗಳಿಸಿದ್ದಾರೆ.



ಸಂಘದ ಸದಸ್ಯ ಶ್ರೀ ಎಲ್. ಪ್ರದೀಪ್ ಕುಮಾರ್ ಹಾಗೂ ಶ್ರೀಮತಿ ನಂದಿನಿಯವರ ಪುತ್ರಿ **ಕುಮಾರಿ ಅಭಿಲಾಷರವರು** ಎಂ.ಟೆಕ್ (Computer Communication) ಪದವಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.



ಸಂಘದ ಸದಸ್ಯೆ ಶ್ರೀಮತಿ ಕೆ.ಎಲ್. ಶಾಂತಾ ಸುಬ್ರಹ್ಮಣ್ಯರವರ ಪುತ್ರಿ **ಕುಮಾರಿ ಸುಹಾಸಿನಿ ಸುಬ್ರಹ್ಮಣ್ಯರವರು** ಎಂ.ಟೆಕ್ (VLSI Embeded) ಪದವಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

**ಸಂಘವು ಪದವೀದರ ವಿದ್ಯಾರ್ಥಿನಿಯರಿಗೆ**
**ಶುಭ ಹಾರೈಸುತ್ತದೆ**

### ಪದಬಂಧ–2ರ ಉತ್ತರ

**ಎನ್. ಶುಭ ಗಾಯತ್ರಿ**

| | | | | | | |
|---|---|---|---|---|---|---|
| 1 ಸ | ಮ | 2 ರ | | 3 ಕ | ಡಿ | 4 ತ |
| ರೋ | | ಮೇ | | ಮ | | ರ |
| ವ | | ಶ | ಬ | ರಿ | | ಕಾ |
| 6 ರ | ಸ | | | | 7 ಕ | ರಿ |
| | | 8 ಮೈ | ಸೂ | ರು | | |

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block,
Kumarapark West, Bengaluru-560 020.

## ಓದುಗರ ಪತ್ರಗಳು



ನಾನು ನನ್ನ ಕುಟುಂಬದವರೊಂದಿಗೆ ದಿನಾಂಕ 2.10.2015ರಂದು ಸಂಘವು ಆಯೋಜಿಸಿದ್ದ ಪ್ರವಾಸದಲ್ಲಿ ಪಾಲ್ಗೊಂಡು ಸಂತೋಷಪಟ್ಟಿದ್ದೇನೆ. ನಾವು 'ಡಿ' ಬಸ್‌ನಲ್ಲಿ ಪ್ರವಾಸದುದ್ದಕ್ಕೂ ಒಂದು ನಿಮಿಷವೂ ನಿದ್ದೆ, ಆಯಾಸದಲ್ಲಿರದೆ ಭಜನೆ, ಅಂತ್ಯಾಕ್ಷರಿ, ಕನ್ನಡದಲ್ಲೇ ಮಾತು, ರಸಪ್ರಶ್ನೆ ಮತ್ತು ಇನ್ನೂ ಮುಂತಾದ ಹಲವಾರು ಚಟುವಟಿಕೆಗಳಲ್ಲಿ ತೊಡಗಿಕೊಂಡು ಆ ಒಂದು ದಿನ ಕ್ಷೇತ್ರದರ್ಶನದೊಂದಿಗೆ ಮನರಂಜನೆಯನ್ನೂ ಪಡೆದೆವು. ಸಂಘವು ಮಾಡಿದ ಸಕಲ ಸಿದ್ಧತೆಗಳೂ ಬಹಳ ಅಚ್ಚುಕಟ್ಟಾಗಿದ್ದಿತು.

✦ ✦

ಪ್ರವಾಸದಂದು ಪ್ರಸಾದರೂಪದ ತಿಂಡಿ, ಊಟಗಳು ಬಹಳ ಪವಿತ್ರವಾಗಿ ಶುಚಿ, ರುಚಿಯಿಂದ ಕೂಡಿತ್ತು. ದೇವರದರ್ಶನವೂ ಮನಸ್ಸಿಗೆ ಆನಂದ ತರುವಂತಿತ್ತು. ಸಂಘದ ಕಾರ್ಯಕಾರಿ ಸಮಿತಿಯವರು ಬಂದವರನ್ನು ತುಂಬಾ ಆದರದಿಂದ ಸ್ವಾಗತಿಸಿ, ಸತ್ಕರಿಸಿದರು ಬೀಳ್ಕೊಡುವ ತನಕವೂ ಸಂಘದವರು ಎಷ್ಟು ಆಸಕ್ತಿ ವಹಿಸಿದ್ದರೆಂದರೆ, ರಾತ್ರಿ ಭೋಜನವನ್ನೂ ಬುತ್ತಿ ಕಟ್ಟಿಕೊಡುವ ಮೂಲಕ ವ್ಯಕ್ತಪಡಿಸಿದರು. ಪೀಲರ್, ಚಾಕು ಸಮೇತ ಬಂದಿದ್ದ ನಮಗೆ ಸೌತೆಕಾಯಿ ಮಾತ್ರ ಕಾಣಿಸಲಿಲ್ಲ.

✦ ✦

ಸಂಘದ ಸದಸ್ಯರೆಲ್ಲರಿಗೂ ಈ ಪ್ರವಾಸದ ಆಯೋಜನೆಯ ವಿಷಯ ಮುಂಚಿತವಾಗಿ ಸರಿಯಾದ ಸಮಯಕ್ಕೆ ತಲುಪುವುದರಲ್ಲಿ ಸ್ವಲ್ಪ ತೊಂದರೆಯಾಗಿದೆ. ಎಲ್ಲರಿಗೂ ಪತ್ರ ಮುಖೇನ ತಿಳಿಸಿದ್ದರೆ ಅಂದಿನ ಜನಸಮೂಹದಲ್ಲಿ ಸಂಖ್ಯೆ ಇನ್ನೂ ಹೆಚ್ಚಾಗಿರುತ್ತಿತ್ತು ಎಂದು ಅನಿಸುತ್ತದೆ. ಇದು ನನ್ನ ವೈಯಕ್ತಿಕ ಸಲಹೆಯೆಂದು ತಿಳಿಯತಕ್ಕದ್ದು. ಇನ್ನು ಮುಂದೆಯೂ ಈ ರೀತಿಯ ಪ್ರವಾಸಗಳಲ್ಲಿ ಹೆಚ್ಚು ಹೆಚ್ಚಾಗಿ ಸದಸ್ಯರು ಕುಟುಂಬ ಸಮೇತ ಭಾಗವಹಿಸುವಂತಾಗಲಿ. ಶುಭಾಶಯಗಳು.

**– ರಾಜೇಶ್ವರಿ**
ಬೆಂಗಳೂರು

Book-Post

To,

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com